**ಕರ್ನಾಟಕ ಸರ್ಕಾರ**

# 2013–14ನೇ ಸಾಲಿಗೆ

**ವಿಮ್ಸ್ ಸಂಸ್ಥೆಯ ಅಧೀನದಲ್ಲಿರುವ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಯಲ್ಲಿ ಖಾಲಿಯಿರುವ ಗ್ರೂಪ್ "ಡಿ" ಹುದ್ದೆಗಳಲ್ಲಿ ಗ್ರೂಪ್ "ಡಿ" ಸಿಬ್ಬಂದಿಯ ಸೇವೆಯನ್ನು ಹೊರ ಸಂಪನ್ಮೂಲದ ಏಜೆನ್ಸಿ ಮೂಲಕ ಭರ್ತಿ ಮಾಡಲು ಅಲ್ಪಾವಧಿ ಟೆಂಡರ್.**

1. ಟೆಂಡರ್‌ದಾರರುಗಳ ಪೂರ್ಣ ವಿಳಾಸ:___________________________________

   ______________________________________________________________

   __________________________________________________

2. ಡಿ.ಡಿ.ಸಂಖ್ಯೆ,ದಿನಾಂಕ:______________________________________________

   ಮೊತ್ತ:____________________________________________________

3. ಬ್ಯಾಂಕಿನ ಹೆಸರು :_______________________________________________

ಕರ್ನಾಟಕ ಸರ್ಕಾರ Web: www.vimsbellary.org GOVERNMENT OF KARNATAKA

# ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬಳ್ಳಾರಿ

# VIJAYANAGAR INSTITUTE OF MEDICAL SCIENCES, BELLARY

Reg.No:205/1995-96] [Recognized by Medical Council of India New Delhi vide No:MCI-57(3)/79-Med/1912 Dated : 16-04-1979

Director : ☏-08392-242387, PA: ☏ -08392-235201, FAX:08392-235202, Principal: ☏ -08392-235204,
e-mail IDs : directorvimsbellary@gmail.com vims_42366@yahoo.com principalvimsbellary@gmail.com

## ಅಲ್ಪಾವಧಿ ಟೆಂಡರ್ ಪ್ರಕಟಣೆ

**ಸಂಖ್ಯೆ: ವಿಮ್ಸ್/ಸಾಮಾನ್ಯ(1)/ 82 / 2013–14** **ದಿನಾಂಕ: 05.06.2013.**

ವಿಮ್ಸ್ ಸಂಸ್ಥೆಯ ಅಧೀನದಲ್ಲಿರುವ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಯಲ್ಲಿ ಖಾಲಿಯಿರುವ ಗ್ರೂಪ್ "ಡಿ" ಹುದ್ದೆಗಳಲ್ಲಿ ಗ್ರೂಪ್ "ಡಿ" ಸಿಬ್ಬಂದಿಯ ಸೇವೆಯನ್ನು ಹೊರ ಸಂಪನ್ಮೂಲದ ಏಜೆನ್ಸಿ ಮೂಲಕ ಭರ್ತಿ ಮಾಡಲು ಅಲ್ಪಾವಧಿ ಟೆಂಡರ್ ಕರೆಯಲಾಗಿದೆ. ಆಸಕ್ತ ಟೆಂಡರ್‌ರುದಾರರು ಅರ್ಜಿ ಸಲ್ಲಿಸಬಹುದಾಗಿದೆ.

| | | |
|---|---|---|
| 1 | ಅಲ್ಪಾವಧಿ ಟೆಂಡರ್ ಫಾರಂ ವಿತರಿಸುವ ದಿನಾಂಕ | ದಿನಾಂಕ: 05.06.2013 ರಿಂದ 14.06.2013 ರ ಸಾಯಂಕಾಲ 5:30 ಗಂಟೆಯವರೆಗೆ (ರಜಾ ದಿನ ಹೊರತುಪಡಿಸಿ) |
| 2 | ಭರ್ತಿ ಮಾಡಿದ ಅಲ್ಪಾವಧಿ ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ, ಸಮಯ ಮತ್ತು ಸ್ಥಳ | ದಿನಾಂಕ : 15.06.2013<br>ಸಮಯ : ಮಧ್ಯಾಹ್ನ 1.00 ಗಂಟೆಯ ವರೆಗೆ<br>ಸ್ಥಳ : ನಿರ್ದೇಶಕರ ಕಛೇರಿ, ವಿಮ್ಸ್, ಬಳ್ಳಾರಿ |
| 3 | ಅಲ್ಪಾವಧಿ ಟೆಂಡರ್ ಫಾರಂ ತೆರೆಯುವ ದಿನಾಂಕ ಮತ್ತು ಸ್ಥಳ. | ದಿನಾಂಕ : 17.06.2013 ರಂದು<br>ಸಮಯ : ಮಧ್ಯಾಹ್ನ 3.00 ಗಂಟೆಗೆ<br>ಸ್ಥಳ : ನಿರ್ದೇಶಕರ ಕಛೇರಿ, ವಿಮ್ಸ್, ಬಳ್ಳಾರಿ |
| 4 | ಅಲ್ಪಾವಧಿ ಟೆಂಡರ್ ಫಾರಂ ದೊರೆಯುವ ಸ್ಥಳ | ನಿರ್ದೇಶಕರ ಕಛೇರಿ, ವಿಮ್ಸ್, ಬಳ್ಳಾರಿ<br>ದೂರವಾಣಿ ಸಂಖ್ಯೆ: 08392–235201<br>ಫ್ಯಾಕ್ಸ್ ಸಂಖ್ಯೆ: 08392–235202 |
| 5 | ಅಲ್ಪಾವಧಿ ಟೆಂಡರ್‌ಗಿಟ್ಟ ಮೊತ್ತ | ರೂ. 1,41,08,160.00 |
| 6 | ಇ.ಎಂ.ಡಿ. ಮೊತ್ತ | ರೂ. 7,05,408.00 |
| 7 | ಅಲ್ಪಾವಧಿ ಟೆಂಡರ್ ಫಾರಂ ಶುಲ್ಕ | ಟೆಂಡರ್ ಫಾರಂನ್ನು ಪಡೆಯಲು, ನಿರ್ದೇಶಕರು , ವಿಮ್ಸ್ ಬಳ್ಳಾರಿ ಇವರ ಹೆಸರಿಗೆ ರೂ. 5000/– (ಎಲ್ಲಾ ತೆರಿಗೆಗಳು ಸೇರಿ, ಹಿಂದಿರುಗಿಸಲಾಗದ ಹಣ) ಮೊತ್ತದ ಡಿ.ಡಿ.ಯನ್ನು ಪಡೆದು ಹಾಗೂ ಸಂಸ್ಥೆಯ ಲೆಟರ್ ಹೆಡ್‌ನೊಂದಿಗೆ ಖುದ್ದಾಗಿ ಫಾರಂ ಪಡೆಯುವುದು. |

**ನಿರ್ದೇಶಕರು,**
**ವಿಮ್ಸ್, ಬಳ್ಳಾರಿ.**

ಕರ್ನಾಟಕ ಸರ್ಕಾರ Web: www.vimsbellary.org GOVERNMENT OF KARNATAKA
ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬಳ್ಳಾರಿ
VIJAYANAGAR INSTITUTE OF MEDICAL SCIENCES, BELLARY
Reg.No:205/1995-96] [Recognized by Medical Council of India New Delhi vide No:MCI-57(3)/79-Med/1912 Dated : 16-04-1979
Director : ☏-08392-242387, PA: ☏ -08392-235201, FAX:08392-235202, Principal: ☏ -08392-235204,
e-mail IDs : directorvimsbellary@gmail.com vims_42366@yahoo.com principalvimsbellary@gmail.com

ಸಂ: ವಿಮ್ಸ್/ಸಾಮಾನ್ಯ–1/82 /2013–14 ದಿನಾಂಕ :05.06.2013.

**ವಿಮ್ಸ್ ಸಂಸ್ಥೆಯ ಅಧೀನದಲ್ಲಿರುವ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಗಳಲ್ಲಿ ಖಾಲಿಯಿರುವ ಗ್ರೂಪ್ "ಡಿ" ಸಿಬ್ಬಂದಿಯ ಸೇವೆಯನ್ನು ಟೆಂಡರ್ ಮೂಲಕ ಹೊರಸಂಪನ್ಮೂಲದ ಏಜೆನ್ಸಿಯ ಮುಖಾಂತರ ಪಡೆಯುವ ಬಗ್ಗೆ.**

ವಿಮ್ಸ್ ಸಂಸ್ಥೆಯ ಅಧೀನದಲ್ಲಿರುವ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಗಳಲ್ಲಿ ಸೇವೆಯನ್ನು ಹೊರಸಂಪನ್ಮೂಲದ ಏಜೆನ್ಸಿಯ ಮುಖಾಂತರ ಪಡೆಯಲು ಅಲ್ಪಾವಧಿ ಗ್ರೂಪ್ "ಡಿ" ಟೆಂಡರ್ ಕರೆಯಲಾಗಿದೆ.

**ಅನುಬಂಧ – "ಅ"**

| ಕ್ರ. ಸಂ | ಇಲಾಖೆ | ಖಾಲಿಯಿರುವ ಗ್ರೂಪ್–'ಡಿ' ಹುದ್ದೆ |
|---|---|---|
| | **ವಿಜಯನಗರ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆ, ವಿಮ್ಸ್ ಬಳ್ಳಾರಿ, ಖಾಲಿ ಇರುವ ಹುದ್ದೆಗಳ ವಿವರ** | |
| 1 | ನೆಲ ಮಹಡಿ ಓ.ಪಿ.ಡಿ. ಮತ್ತು ಒಂದನೇ ಮಹಡಿ ಓ.ಪಿ.ಡಿ. | 50 |
| 2 | ನೆಲ ಮಹಡಿ ವಾರ್ಡ್ | 30 |
| 3 | ಮೊದಲನೆಯ ಮಹಡಿ ವಾರ್ಡ್ | 25 |
| 4 | ಎರಡನೆಯ ಮಹಡಿ ವಾರ್ಡ್ | 20 |
| 5 | ಅಪರೇಷನ್ ಥಿಯೇಟರ್, ಕಿಚೆನ್, ದೋಬಿ ಘಾಟ್ | 20 |
| 6 | ಸ್ವಚ್ಛತಾ ಮತ್ತು ಭಂಗಿ (ಸ್ಕ್ಯಾವೆಂಜರ್) | 15 |
| | **ಒಟ್ಟು** | **160** |

1) ಟೆಂಡರ್‌ದಾರರು ನಿಗಧಿತ ಫಾರಂನಲ್ಲಿ ಟೆಂಡರ್ ಸಲ್ಲಿಸುವುದು. ಈ ಬಗ್ಗೆ ಟೆಂಡರ್‌ದಾರರಿಗೆ ನಿಗಧಿಪಡಿಸಿರುವ ಅರ್ಹತೆ ಮತ್ತು ಅನುಭವಗಳು ಇರತಕ್ಕದ್ದು.
2) ಅಲ್ಪಾವಧಿ ಟೆಂಡರ್ ಫಾರಂಗಳನ್ನು ರೂ. 5000/–ಗಳ ಡಿ.ಡಿ. ನೀಡಿ ನಿರ್ದೇಶಕರು, ವಿಮ್ಸ್, ಬಳ್ಳಾರಿ ಇವರ ಕಛೇರಿಯಿಂದ ಖುದ್ದು ಖರೀದಿಸಬಹುದು.
3) ಅಲ್ಪಾವಧಿ ಟೆಂಡರ್ ಫಾರಂ ಜೊತೆ ಅಗತ್ಯ ದಾಖಲೆಗಳನ್ನು ಮತ್ತು ಇ.ಎಂ.ಡಿ. ಹಣವನ್ನು ತಪ್ಪದೇ ಸಲ್ಲಿಸುವುದು.
4) ಅಲ್ಪಾವಧಿ ಟೆಂಡರ್ ಫಾರಂಗಳನ್ನು ಸಲ್ಲಿಸಲು ಇರುವ ಕೊನೆಯ ದಿನಾಂಕ: 15.06.2013 ರಂದು ಮದ್ಯಾಹ್ನ 1:00 ಗಂಟೆ ಆಗಿದ್ದು, ಈ ಅವಧಿಯಲ್ಲಿ ಟೆಂಡರ್ ಫಾರಂಗಳನ್ನು ಕಛೇರಿಯಲ್ಲಿ ಪಡೆದು ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಟೆಂಡರ್ ಪೆಟ್ಟಿಗೆಯಲ್ಲಿ ಹಾಕತಕ್ಕದ್ದು.
5) ಹೆಚ್ಚಿನ ವಿವರಗಳು ಅಲ್ಪಾವಧಿ ಟೆಂಡರ್ ಫಾರಂ ಜೊತೆ ಇರುವ ದಸ್ತಾವೇಜುಗಳಲ್ಲಿ ಲಭ್ಯವಿದ್ದು, ಪರಿಶೀಲಿಸುವುದು.

**ನಿರ್ದೇಶಕರು,**
**ವಿಮ್ಸ್, ಬಳ್ಳಾರಿ.**

**ವಿಮ್ಸ್ ಸಂಸ್ಥೆಯ ಅಧೀನದಲ್ಲಿರುವ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಗಳಲ್ಲಿ ಖಾಲಿಯಿರುವ ಗ್ರೂಪ್ "ಡಿ" ಸಿಬ್ಬಂದಿಯ ಸೇವೆಯನ್ನು ಹೊರಸಂಪನ್ಮೂಲದ ಏಜೆನ್ಸಿಯ ಮುಖಾಂತರ ಪಡೆಯುವ ಬಗ್ಗೆ ಅಲ್ಪಾವಧಿ ಟೆಂಡರ್ ಮಾಹಿತಿಗಳು**

| | | | |
|---|---|---|---|
| 1 | ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: ದಿನಾಂಕ | : | ಸಂಖ್ಯೆ: ವಿಮ್ಸ್ /ಸಾಮಾನ್ಯ(1)/82 /2013-14<br>ದಿನಾಂಕ: 05.06.2013. |
| 2 | ಅಲ್ಪಾವಧಿ ಟೆಂಡರ್‌ಗೆ ಇಟ್ಟ ಮೊತ್ತ | : | ರೂ. 1,41,08,160.00 |
| 3 | ಅಲ್ಪಾವಧಿ ಟೆಂಡರ್ ಫಾರಂ ಬೆಲೆ | : | ರೂ. 5000/- |
| 4 | ಅಲ್ಪಾವಧಿ ಟೆಂಡರ್ ಫಾರಂ ವಿತರಿಸುವ ದಿನಾಂಕ | : | 05.06.2013 ರಿಂದ 14.06.2013 ರವರೆಗೆ |
| 5 | ಭರ್ತಿ ಮಾಡಿದ ಟೆಂಡರ್ ಫಾರಂ ಸಲ್ಲಿಸಲು ಅಂತಿಮ ದಿನಾಂಕ, ಸಮಯ ಮತ್ತು ಕಛೇರಿ ವಿಳಾಸ | :<br><br>: | ದಿನಾಂಕ : 15.06.2013.<br>ಸಮಯ : ಮಧ್ಯಾಹ್ನ 1:00 ಗಂಟೆ ವರೆಗೆ<br>ಸ್ಥಳ : ನಿರ್ದೇಶಕರ ಕಛೇರಿ, ವಿಮ್ಸ್, ಬಳ್ಳಾರಿ |
| 6 | ತಾಂತ್ರಿಕ ಲಕೋಟೆಯನ್ನು ತೆರೆಯುವ ದಿನಾಂಕ ಹಾಗೂ ಸಮಯ | : | ದಿನಾಂಕ : 17.06.2013.<br>ಸಮಯ : ಮಧ್ಯಾಹ್ನ 3:00 ಗಂಟೆಗೆ<br>ಸ್ಥಳ : ನಿರ್ದೇಶಕರ ಕಛೇರಿ, ವಿಮ್ಸ್, ಬಳ್ಳಾರಿ |
| 7 | ಆರ್ಥಿಕ ಲಕೋಟೆಯನ್ನು ತೆರೆಯುವ ಸ್ಥಳ ವೇಳೆ ಮತ್ತು ದಿನಾಂಕ | : | ದಿನಾಂಕ : 17.06.2013.<br>ಸಮಯ : ಮಧ್ಯಾಹ್ನ 4:30 ಗಂಟೆಗೆ<br>ಸ್ಥಳ : ನಿರ್ದೇಶಕರ ಕಛೇರಿ, ವಿಮ್ಸ್, ಬಳ್ಳಾರಿ |
| 8 | ಅಲ್ಪಾವಧಿ ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ.ಮೊತ್ತ | : | ರೂ. 7,05,408.00 |
| 9 | ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ | : | ನಿರ್ದೇಶಕರ ಕಛೇರಿ, ವಿಮ್ಸ್, ಬಳ್ಳಾರಿ.<br>ದೂರವಾಣಿ ಸಂಖ್ಯೆ: 08392-235201<br>ಫ್ಯಾಕ್ಸ್: 08392-235202 |

ನಿರ್ದೇಶಕರು,
ವಿಮ್ಸ್, ಬಳ್ಳಾರಿ.

## ವಿಮ್ಸ್ ಸಂಸ್ಥೆಯ ಅಧೀನದಲ್ಲಿರುವ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಗಳಲ್ಲಿ ಖಾಲಿಯಿರುವ ಗ್ರೂಫ್ "ಡಿ" ಸಿಬ್ಬಂದಿಯ ಸೇವೆಯನ್ನು ಹೊರಸಂಪನ್ಮೂಲದ ಏಜೆನ್ಸಿಯ ಮುಖಾಂತರ ಪಡೆಯುವ ಬಗ್ಗೆ ಅಲ್ಪಾವಧಿ ಟೆಂಡರ್ ಪ್ರಕಟಣೆ

**ಅ) ಪೀಠಿಕೆ:**

ವಿಮ್ಸ್ ಸಂಸ್ಥೆಯ ಅಧೀನದಲ್ಲಿರುವ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಗಳಲ್ಲಿ ಖಾಲಿಯಿರುವ ಗ್ರೂಫ್ "ಡಿ" ಸಿಬ್ಬಂದಿಯ ಸೇವೆಯನ್ನು ಹೊರಸಂಪನ್ಮೂಲದ ಏಜೆನ್ಸಿಯ ಮುಖಾಂತರ ಪಡೆಯುವ ಬಗ್ಗೆ ಅಲ್ಪಾವಧಿ ಟೆಂಡರ್ ಕರೆಯಲು ಉದ್ದೇಶಿಸಿದೆ.

**ಆ) ಟೆಂಡರ್ ದಾಖಲೆಗಳು ಮತ್ತು ಟೆಂಡರ್‌ದಾರರಿಗೆ ಸೂಚನೆಗಳು :**

1. **ಟೆಂಡರ್ ಉದ್ದೇಶ** : ಬಳ್ಳಾರಿ ಜಿಲ್ಲೆಯ ವ್ಯಾಪ್ತಿಯಲ್ಲಿ ಈ ಕೆಳಕಂಡ ಷೆಡ್ಯೂಲ್‌ನಲ್ಲಿರುವ ವಿಮ್ಸ್ ಸಂಸ್ಥೆಯ ಅಧೀನದಲ್ಲಿರುವ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಗಳಲ್ಲಿ ಖಾಲಿಯಿರುವ ಗ್ರೂಫ್ "ಡಿ" ಸಿಬ್ಬಂದಿಯ ಸೇವೆಯನ್ನು ಹೊರಸಂಪನ್ಮೂಲದ ಏಜೆನ್ಸಿಯ ಮುಖಾಂತರ ಪಡೆಯುವ ಬಗ್ಗೆ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ.

| ಕ್ರ. ಸಂ | ಇಲಾಖೆ | ಖಾಲಿಯಿರುವ ಗ್ರೂಪ್–'ಡಿ' ಹುದ್ದೆ |
|---|---|---|
| | **ವಿಜಯನಗರ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆ, ವಿಮ್ಸ್ ಬಳ್ಳಾರಿ, ಖಾಲಿ ಇರುವ ಹುದ್ದೆಗಳ ವಿವರ** | |
| 1 | ನೆಲ ಮಹಡಿ ಓ.ಪಿ.ಡಿ. ಮತ್ತು ಒಂದನೇ ಮಹಡಿ ಓ.ಪಿ.ಡಿ. | 50 |
| 2 | ನೆಲ ಮಹಡಿ ವಾರ್ಡ್ | 30 |
| 3 | ಮೊದಲನೆಯ ಮಹಡಿ ವಾರ್ಡ್ | 25 |
| 4 | ಎರಡನೆಯ ಮಹಡಿ ವಾರ್ಡ್ | 20 |
| 5 | ಅಪರೇಷನ್ ಥಿಯೇಟರ್, ಕಿಚೆನ್, ದೋಬಿ ಘಾಟ್ | 20 |
| 6 | ಸ್ವಚ್ಛತಾ ಮತ್ತು ಭಂಗಿ (ಸ್ಕ್ಯಾವೆಂಜರ್) | 15 |
| | **ಒಟ್ಟು** | **160** |

ಮಾನವ ಸಂಪನ್ಮೂಲ ಒದಗಿಸಲು ಅರ್ಹತೆಯುಳ್ಳ ಮತ್ತು ವಿವಿಧ ಕಾಯ್ದೆಗಳ ಕಾನೂನಿನ ಅಡಿಯಲ್ಲಿ ನೋಂದಣಿ ಮಾಡಿಕೊಂಡ ವ್ಯಕ್ತಿಗಳು/ ಸಂಸ್ಥೆಗಳು/ಏಜೆನ್ಸಿಗಳು ನಿಗಧಿತ ಟೆಂಡರ್ ಫಾರಂನಲ್ಲಿ ಅರ್ಜಿ ಸಲ್ಲಿಸಬಹುದು. ಅಲ್ಪಾವಧಿ ಟೆಂಡರ್ ಫಾರಂನ್ನು ರೂ. 5000/–ಗಳಿಗೆ ಡಿ.ಡಿ.ಯನ್ನು ನಿರ್ದೇಶಕರು, ವಿಮ್ಸ್, ಬಳ್ಳಾರಿ ಇವರ ಹೆಸರಿಗೆ ನೀಡಿ ಟೆಂಡರ್ ಫಾರಂ ಪಡೆಯಬಹುದು.

2. **ಟೆಂಡರ್‌ದಾರರ ಅರ್ಹತೆ** : ಟೆಂಡರ್‌ದಾರರು ಯಾವುದೇ ಕಾನೂನಿನ ಅಡಿಯಲ್ಲಿ ಅವ್ಯವಹಾರಗಳ ಬಗ್ಗೆ ಅನರ್ಹರೆಂದು ಪರಿಗಣಿಸಿರಬಾರದು. ಟೆಂಡರ್‌ದಾರರಿಗೆ ಇರಬೇಕಾದ ಅರ್ಹತೆಗಳ ಬಗ್ಗೆ ವಿವರಗಳನ್ನು ಈ ಟೆಂಡರ್‌ನ ದಸ್ತಾವೇಜು ದಾಖಲೆಗಳಲ್ಲಿ ಟೆಂಡರ್‌ದಾರರಿಗೆ ನೀಡಿದೆ. ಈ ಬಗ್ಗೆ ಯಾವುದೇ ವಿಷಯಗಳ ಬಗ್ಗೆ ಸ್ಪಷ್ಟೀಕರಣದ ವಿಷಯವನ್ನು ಲಿಖಿತವಾಗಿ ನೀಡಿ ಟೆಂಡರ್ ಕರೆದಿರುವ ಪ್ರಾಧಿಕಾರದ ಮಾಹಿತಿ ಪಡೆಯಬಹುದು.
   - ಟೆಂಡರ್‌ದಾರರ ಕಳೆದ 03 ವರ್ಷಗಳಲ್ಲಿ ನಡೆಸಿದ ವಹಿವಾಟಿನ ಆಡಿಟ್ ವರದಿಗಳನ್ನು ಪ್ರತಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ ಸಲ್ಲಿಸಬೇಕು.
   - ಕಳೆದ 03 ವರ್ಷಗಳಲ್ಲಿ (2010–11, 2011–12, 2012–13) ಹೊರಸಂಪನ್ಮೂಲ ಏಜೆನ್ಸಿಯಾಗಿ ಸರ್ಕಾರಿ ಆಸ್ಪತ್ರೆಗಳಲ್ಲಿ ಮತ್ತು ಸಂಸ್ಥೆಗಳಿಂದ ತೃಪ್ತಿಕರ ಸೇವೆಯ ಬಗ್ಗೆ ದೃಢೀಕರಣ ಪತ್ರಗಳನ್ನು ಗ್ರೂಪ್–'ಡಿ' ಸೇವೆಯನ್ನು ಪೂರೈಸಿದ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದ ಅನುಭವ ಪ್ರಮಾಣ ಪತ್ರಗಳನ್ನು ಹಾಗೂ ಕಾರ್ಯಾದೇಶಗಳನ್ನು ಪ್ರತಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ ಸಲ್ಲಿಸಬೇಕು.

- ಆಯ್ಕೆಯಾದ ಯಶಸ್ವಿ ಟೆಂಡರ್‌ದಾರರು ಸಂಬಂಧಪಟ್ಟ ಹೊರಗುತ್ತಿಗೆ ನೌಕರರ ಬ್ಯಾಂಕ್ ಖಾತೆಗಳಿಗೆ ಸದರಿಯವರ ಹಾಜರಾತಿಗನುಗುಣವಾಗಿ (Take home salary) ಯನ್ನು ಜಮಾ ಮಾಡಬೇಕು.
- ಪ್ರಸ್ತಕ ಆರ್ಥಿಕ ವರ್ಷದ ಆರ್ಥಿಕ ಸದೃಢತೆ ಪ್ರಮಾಣ ಪತ್ರವನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಪಡೆದು ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ ಸಲ್ಲಿಸತಕ್ಕದ್ದು. ಗ್ರೂಪ್–'ಡಿ' ಹುದ್ದೆಗೆ ವಾರ್ಷಿಕವಾಗಿ ಟೆಂಡರ್‌ಗಿಟ್ಟ ಮೊತ್ತದ ಶೇ.80% ರಷ್ಟು ಮೊತ್ತಕ್ಕೆ ಪಡೆದುಕೊಳ್ಳುವುದು.
- ಇ.ಎಂ.ಡಿ. ಮೊತ್ತದ ರಾಷ್ಟ್ರೀಕೃತ ಬ್ಯಾಂಕುಗಳಿಂದ ನಿರ್ದೇಶಕರು, ವಿಮ್ಸ್, ಬಳ್ಳಾರಿ ಇವರ ಹೆಸರಿಗೆ ಪಡೆದು ಸಲ್ಲಿಸತಕ್ಕದ್ದು.
- ತಾಂತ್ರಿಕ ಲಕೋಟೆಯಲ್ಲಿ ಕೇಳಲಾದ ಎಲ್ಲಾ ದಾಖಲಾತಿಗಳನ್ನು ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ ಸಲ್ಲಿಸತಕ್ಕದ್ದು.

3. **<u>ಟೆಂಡರ್ ದಾಖಲೆಗಳ ತಿದ್ದುಪಡಿ</u>** : ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕಕ್ಕೆ ಮುನ್ನ ಈ ಬಗ್ಗೆ ಇರುವ ಟೆಂಡರ್ ದಾಖಲೆಗಳನ್ನು ತಿದ್ದುಪಡಿ ಮಾಡುವ/ ಬದಲಾಯಿಸುವ ಅಧಿಕಾರ ಟೆಂಡರ್ ಕರೆದಿರುವ ಪ್ರಾಧಿಕಾರ ಹೊಂದಿದೆ. ಈ ರೀತಿ ಯಾವುದೇ ತಿದ್ದುಪಡಿ ಆದಲ್ಲಿ ಅದನ್ನು ಟೆಂಡರುದಾರರಿಗೆ ತಿಳಿಸಲಾಗುವುದು.

4. **<u>ಟೆಂಡರ್ ದಸ್ತಾವೇಜುಗಳಲ್ಲಿರುವ ದಾಖಲೆಗಳು</u>** : ಈ ಅಲ್ಪಾವಧಿ ಟೆಂಡರ್‌ನ ದಸ್ತಾವೇಜುಗಳಲ್ಲಿ ಅಲ್ಪಾವಧಿ ಟೆಂಡರ್ ಕರೆದಿರುವ ಬಗ್ಗೆ ವಿವರಗಳು, ಅರ್ಹತೆಗಳು, ನಿಬಂಧನೆಗಳು ಇತ್ಯಾದಿ ವಿವರಗಳು ಲಭ್ಯ ಇವೆ. ಅಲ್ಲದೇ ಈ ಕೆಳಕಂಡ ದಾಖಲೆಗಳು ದಸ್ತಾವೇಜುಗಳಲ್ಲಿ ಲಭ್ಯ ಇವೆ.
   - ಟೆಂಡರ್ ಆಹ್ವಾನ
   - ಟೆಂಡರ್‌ದಾರರಿಗೆ ಸೂಚನೆಗಳು
   - ಟೆಂಡರ್ ಫಾರಂ ಮತ್ತು ಹಣಕಾಸು ಷೆಡ್ಯೂಲ್
   - ಟೆಂಡರ್‌ಗೆ ಸಂಬಂಧಿಸಿದಂತೆ ಸೂಚನೆಗಳು, ಷರತ್ತುಗಳು ಮತ್ತು ತಾಂತ್ರಿಕ ವಿವರಗಳು
   - ಇ.ಎಂ.ಡಿ. ಬ್ಯಾಂಕ್ ಗ್ಯಾರಂಟಿ ವಿವರಗಳು
   - ಕಾರ್ಯಾಧಾರಿತ ಭದ್ರತೆ (Performance security) ವಿವರಗಳು

ಟೆಂಡರ್‌ದಾರರು ಈ ಎಲ್ಲಾ ದಾಖಲೆಗಳು, ನಿಬಂಧನೆಗಳು ಮತ್ತು ಟೆಂಡರ್‌ನ ಷರತ್ತುಗಳನ್ನು ಹಾಗೂ ಟೆಂಡರ್ ದಾರರಿಗೆ ಇರುವ ಅರ್ಹತಾ ಸೂಚನೆಗಳನ್ನು ಪರಿಶೀಲಿಸಿ, ಅರ್ಥ ಮಾಡಿಕೊಂಡು ಸೂಕ್ತ ಮಾಹಿತಿ ಮತ್ತು ದಾಖಲಾತಿಗಳೊಂದಿಗೆ ಪೂರ್ಣ ಪ್ರಮಾಣದಲ್ಲಿ ಟೆಂಡರ್ ಸಲ್ಲಿಸುವುದು. ಅಪೂರ್ಣ ಮಾಹಿತಿಯುಳ್ಳ ಟೆಂಡರ್‌ನ್ನು ತಿರಸ್ಕರಿಸಲಾಗುವುದು.

5. **<u>ಟೆಂಡರ್ ಜೊತೆಗೆ ಸಲ್ಲಿಸಬೇಕಾದ ದಾಖಲೆಗಳು</u>**: ಟೆಂಡರ್ ಸಲ್ಲಿಸುವವರು ಎರಡು ಲಕೋಟೆ ಪದ್ಧತಿಯಲ್ಲಿ ಅಂದರೆ, ಅಲ್ಪಾವಧಿ ಟೆಂಡರ್ ಫಾರಂ (ತಾಂತ್ರಿಕ ಲಕೋಟೆ) ಮತ್ತು ಆರ್ಥಿಕ ಲಕೋಟೆಯಲ್ಲಿ ನಿಗಧಿತ ಫಾರಂಗಳಲ್ಲಿ ವಿವರಗಳನ್ನು ಪ್ರತ್ಯೇಕವಾಗಿ ಸಲ್ಲಿಸಬೇಕು.

6. **<u>(1) ಟೆಂಡರ್ ಫಾರಂ (ತಾಂತ್ರಿಕ ಲಕೋಟೆ) ಯಲ್ಲಿ ಸಲ್ಲಿಸಬೇಕಾದ ದಾಖಲೆಗಳು</u>**:

- ಪೂರ್ಣ ಮಾಹಿತಿಯೊಂದಿಗೆ ಭರ್ತಿ ಮಾಡಿದ ನಿಗಧಿತ ಟೆಂಡರ್ ಫಾರಂ.
- ಟೆಂಡರ್‌ದಾರರಿಗೆ ಇರುವ ಅನುಭವ ಮತ್ತು ಅರ್ಹತೆ ಬಗ್ಗೆ ಮಾಹಿತಿ ಹಾಗೂ ದಾಖಲೆಗಳನ್ನು ಸಲ್ಲಿಸಬೇಕು.
- ಟೆಂಡರ್‌ದಾರರು ವಿವಿಧ ಕಾಯ್ದೆಗಳ ಅಡಿಯಲ್ಲಿ ಅಂದರೆ,

1. ಕಾರ್ಮಿಕ ಕಾಯ್ದೆ – ಸದರಿ ಏಜೆನ್ಸಿಯು ಕಾರ್ಮಿಕ ಇಲಾಖೆಯಿಂದ ನೋಂದಣಿಯಾಗಿರತಕ್ಕದ್ದು.
2. ಕಾರ್ಮಿಕ ಭವಿಷ್ಯ ನಿಧಿ (ಇ.ಪಿ.ಎಫ್) ಕಾಯ್ದೆ.– ಭವಿಷ್ಯ ನಿಧಿ ಕಛೇರಿಯಿಂಧೇ ನೋಂದಣಿಯಾಗಿರತಕ್ಕದ್ದು
3. ರಾಜ್ಯ ಕಾರ್ಮಿಕ ವಿಮಾ (ಇ.ಎಸ್.ಐ) ಕಾಯ್ದೆ.– ಇ.ಎಸ್.ಐ ಕಾಯ್ದೆಯಡಿಯಲ್ಲಿ ನೋಂದಣಿಯಾಗಿರತಕ್ಕದ್ದು
4. ಸೇವಾ ತೆರಿಗೆ ಕಾಯ್ದೆ– ಸೇವಾ ತೆರಿಗೆ ಕಾಯ್ದೆ ಅಡಿಯಲ್ಲಿ ನೋಂದಣಿಯಾಗಿರತಕ್ಕದ್ದು
5. ವೃತ್ತಿಪರ ತೆರಿಗೆ ಕಾಯ್ದೆ –ವಾಣಿಜ್ಯ ತೆರಿಗೆ ಇಲಾಖೆಯಿಂದ ವೃತ್ತಿ ತೆರಿಗೆ ಇತ್ತಿಚ್ಚಿನ ನವೀಕರಣ ಪ್ರಮಾಣ ಪತ್ರ ಹೊಂದಿರತಕ್ಕದ್ದು
6. PAN ಕಾರ್ಡ್ ಹೊಂದಿರಬೇಕು– ಆದಾಯ ತೆರಿಗೆ ಇಲಾಖೆಯಿಂದ ಏಜೆನ್ಸಿಯ ಹೆಸರಿನ ಮೇಲೆ PAN ನಂಬರ್ ಹೊಂದಿರತಕ್ಕದ್ದು (ವ್ಯಕ್ತಿಗತ, ಏಜೆನ್ಸಿ/ಸಂಸ್ಥೆ ಮಾಲಕರ ಹೆಸರಿನ PAN ನಂಬರ್ ಪರಿಗಣಿಸಲಾಗುವುದಿಲ್ಲ.
7. ವಾಣಿಜ್ಯ ತೆರಿಗೆ ಇಲಾಖೆಯಿಂದ ಇತ್ತಿಚ್ಚಿನ ಕ್ಲಿಯರನ್ಸ್ ಪ್ರಮಾಣ ಪತ್ರವನ್ನು ಸಂಬಂದಪಟ್ಟ ಪ್ರಾದಿಕಾರದಿಂದ ಸಲ್ಲಿಸತಕ್ಕದ್ದು.
8. ಸಾಮಾನ್ಯ ಭವಿಷ್ಯನಿಧಿ (E.P.F) ಸಂಸ್ಥೆ/ಕಛೇರಿಯಿಂದ ಇತ್ತಿಚ್ಚಿನ ಬೇಬಾಕಿ ಪ್ರಮಾಣ ಪತ್ರವನ್ನು ಸಂಬಂದಸಿದ ಪ್ರಾಧಿಕಾರದಿಂದ ಪಡೆದು ಸಲ್ಲಿಸತಕ್ಕದ್ದು.
9. E.S.I. ಕಛೇರಿಯಿಂದ ಇತ್ತಿಚ್ಚಿನ ಬೇಬಾಕಿ ಪ್ರಮಾಣ ಪತ್ರವನ್ನು ಸಂಬಂದಿಸಿ ಪ್ರಾಧಿಕಾರಿಯಿಂದ ಪಡೆದು ಸಲ್ಲಿಸತ್ಕದ್ದು.

ಕಾಯ್ದೆಯ ಅಡಿಯಲ್ಲಿ ನೋಂದಣಿ ಮಾಡಿದ ದಾಖಲಾತಿಗಳನ್ನು ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ ಸಲ್ಲಿಸಬೇಕು.

- ಟೆಂಡರ್‌ದಾರರ ಕಳೆದ 03 ವರ್ಷಗಳಲ್ಲಿ ನಡೆಸಿದ ವಹಿವಾಟಿನ ಆಡಿಟ್ ವರದಿಗಳನ್ನು ಪ್ರತಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ ಸಲ್ಲಿಸಬೇಕು.
- ಕಳೆದ 03 ವರ್ಷಗಳ ವಾರ್ಷಿಕ ವಹಿವಾಟು ದಾಖಲೆಗಳು ಮತ್ತು ಆರ್ಥಿಕ ದೃಢತೆ ದೃಢೀಕರಿಸುವ ಬಗ್ಗೆ ದಾಖಲೆಗಳನ್ನು ಪ್ರತಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ ಸಲ್ಲಿಸಬೇಕು.
- ಕಳೆದ 03 ವರ್ಷಗಳಲ್ಲಿ (2010–11, 2011–12, 2012–13) ಹೊರಸಂಪನ್ಮೂಲ ಏಜೆನ್ಸಿಯಾಗಿ ಸರ್ಕಾರಿ ಆಸ್ಪತ್ರೆಗಳಲ್ಲಿ ಮತ್ತು ಸಂಸ್ಥೆಗಳಿಂದ ತೃಪ್ತಿಕರ ಸೇವೆಯ ಬಗ್ಗೆ ದೃಢೀಕರಣ ಪತ್ರಗಳನ್ನು ಗ್ರೂಪ್–'ಡಿ' ಸೇವೆಯನ್ನು ಪೂರೈಸಿದ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದ ಅನುಭವ ಪ್ರಮಾಣ ಪತ್ರಗಳನ್ನು ಹಾಗೂ ಕಾರ್ಯಾದೇಶಗಳನ್ನು ಪ್ರತಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ ಸಲ್ಲಿಸಬೇಕು.
- ರಾಷ್ಟ್ರೀಕೃತ ಬ್ಯಾಂಕುಗಳಿಂದ ಶೇ 80% ರಷ್ಟು ಟೆಂಡರ್ ಬೆಲೆಯ ಮುಖ ಬೆಲೆಯುಳ್ಳ ಸಾಲ್ವೆನ್ಸಿ ಸರ್ಟೀಫಿಕೇಟ್‌ನ್ನು ಪ್ರತಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ ಸಲ್ಲಿಸಬೇಕು.
- ರೂ. 7,05,408.00 ಇ.ಎಂ.ಡಿ. ಮೊತ್ತವನ್ನು ರಾಷ್ಟ್ರೀಕೃತ ಬ್ಯಾಂಕುಗಳಿಂದ ನಿರ್ದೇಶಕರು, ವಿಮ್ಸ್, ಬಳ್ಳಾರಿ ಇವರ ಹೆಸರಿಗೆ ಪಡೆದು ಸಲ್ಲಿಸತಕ್ಕದ್ದು.
- ತಾಂತ್ರಿಕ ಲಕೋಟೆಯಲ್ಲಿ ಸಲ್ಲಿಸುವ ಎಲ್ಲಾ ದಾಖಲೆಗಳನ್ನು ಪ್ರತಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ ಸಲ್ಲಿಸಬೇಕು

6. **(2) ಆರ್ಥಿಕ ಲಕೋಟೆಯಲ್ಲಿ ಸಲ್ಲಿಸಬೇಕಾದ ವಿವರಗಳು:** ಆರ್ಥಿಕ ನಮೂನೆಯಲ್ಲಿ ಟೆಂಡರ್ ದರವನ್ನು ಸಂಖ್ಯೆ ಹಾಗೂ ಅಕ್ಷರಗಳಲ್ಲಿ ನಮೂದಿಸಿ ಸಲ್ಲಿಸಬೇಕು. ಆರ್ಥಿಕ ಟೆಂಡರ್‌ನಲ್ಲಿ ಟೆಂಡರ್‌ದಾರರು ತಾನು ನೀಡುವ ಪ್ರತಿ ಸಿಬ್ಬಂದಿ ಸೇವೆಗೆ ಸೇವಾ ವೆಚ್ಚವನ್ನು ನಮೂದಿಸಬೇಕು. ಈ ಸೇವಾ ವೆಚ್ಚವನ್ನು ಪ್ರತಿ ಸಿಬ್ಬಂದಿಯು ಪಡೆಯುವ ಒಟ್ಟು ವೇತನಕ್ಕೆ (ವೇತನ + ವಂತಿಕೆಗಳು) ಶೇಕಡವಾರು ಪ್ರಮಾಣದಲ್ಲ ನಮೂದಿಸಬೇಕು (ಉದಾ: ಒಟ್ಟು ವೇತನದ 1%, 2%, ಇತ್ಯಾದಿ) ಕಡಿಮೆ ಸೇವಾ ವೆಚ್ಚವನ್ನು ನಮೂದಿಸಿದ ಟೆಂಡರ್‌ದಾರರು ಯಶಸ್ವಿ ಟೆಂಡರ್‌ದಾರರಾಗುತ್ತಾರೆ. ಯಾವುದೇ ಕಾರಣಕ್ಕೂ 0% ನಮೂದಿಸಿದ ಟೆಂಡರ್‌ಗಳನ್ನು Nagetive ಟೆಂಡರೆಂದು ಪರಿಗಣಿಸಿ ತಿರಸ್ಕರಿಸಲಾಗುವುದು.

7. **ಇ.ಎಂ.ಡಿ. ಮೊತ್ತ :**

ಟೆಂಡರ್‌ದಾರರು ಪ್ರತಿ ಟೆಂಡರ್ ಜೊತೆ ರೂ. 7,05,408.00 ಇ.ಎಂ.ಡಿ. ಸಲ್ಲಿಸತಕ್ಕದ್ದು.

- ಇ.ಎಂ.ಡಿ. ಚೆಕ್‌ನ್ನು ರಾಷ್ಟ್ರೀಕೃತ ಬ್ಯಾಂಕ್ ಮೂಲಕ ಪಡೆಯತಕ್ಕದ್ದು.
- ಟೆಂಡರ್ ಫಾರಂ ಜೊತೆ ಇ.ಎಂ.ಡಿ. ಸಲ್ಲಿಸದೇ ಇರುವ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.
- ಯಶಸ್ವಿ ಬಿಡ್‌ದಾರರು ಕಾರ್ಯಾದೇಶ ಪಡೆದ ನಂತರ ಈ ಬಗ್ಗೆ ನಿಗಧಿತ 15 ದಿನಗಳ ಅವಧಿಯಲ್ಲಿ ಕರಾರು ಮಾಡಿಕೊಳ್ಳದೇ ಇದ್ದಲ್ಲಿ ಪ್ರತಿ ದಿನಕ್ಕೆ ರೂ. 1000/– ದಂಡ ವಿಧಿಸಲಾಗುವುದು ಅಥವಾ ಕಾಂಟ್ರಾಕ್ಟ್ ಅವಧಿಯಲ್ಲಿ ಕಾಂಟ್ರಾಕ್ಟ್ ಕೆಲಸ ನಿಲ್ಲಿಸಿದಲ್ಲಿ ಇ.ಎಂ.ಡಿ. ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಅಲ್ಲದೇ ಟೆಂಡರ್ ಷರತ್ತುಗಳನ್ನು ಉಲ್ಲಂಘನೆ ಮಾಡಿದ ಸಂದರ್ಭದಲ್ಲೂ ಸಹ ಕಾರ್ಯಾದೇಶ ರದ್ದುಪಡಿಸಿ ಇ.ಎಂ.ಡಿ. ಹಣ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಹಾಗೂ ಅಂಥವರ ಏಜೆನ್ಸಿಯ ಹೆಸರನ್ನು ಕಪ್ಪು ಪಟ್ಟಿಯಲ್ಲಿ ಸೇರಿಸಲಾಗುವುದು.
- ಯಶಸ್ವಿಯಾಗದ ಟೆಂಡರ್‌ದಾರರ ಇ.ಎಂ.ಡಿ.ಯನ್ನು ಯಶಸ್ವಿ ಬಿಡ್‌ದಾರರಿಗೆ ಕಾರ್ಯಾದೇಶ ನೀಡಿದ ನಂತರ ಬಡ್ಡಿ ರಹಿತವಾಗಿ ಹಿಂತಿರುಗಿಸಲಾಗುವುದು.

8. **ಅಲ್ಪಾವಧಿ ಟೆಂಡರ್ ಸಲ್ಲಿಸುವಿಕೆ:**

- ಟೆಂಡರ್‌ದಾರರು ಬಿಡ್‌ನ್ನು ಪ್ರತ್ಯೇಕವಾಗಿ ಅಲ್ಪಾವಧಿ ಟೆಂಡರ್ ಫಾರಂಗಳಿಗನುಸಾರವಾಗಿ (ತಾಂತ್ರಿಕ ಬಿಡ್) ಮತ್ತು ಆರ್ಥಿಕ ಫಾರಂನ್ನು ಪ್ರತ್ಯೇಕ ಲಕೋಟೆಗಳಲ್ಲಿಟ್ಟು ಮೊಹರ್ ಮಾಡುವುದು. ಸಂಬಂಧಪಟ್ಟ ಲಕೋಟೆಗಳ ಮೇಲೆ **ತಾಂತ್ರಿಕ ಬಿಡ್/ಆರ್ಥಿಕ ಬಿಡ್** ಎಂದು ಸ್ಪಷ್ಟವಾಗಿ ನಮೂದಿಸಬೇಕು.

- 0% ಬಿಡ್ ಹಾಕಿದ್ದಲ್ಲಿ ಅದನ್ನು ಪರಿಗಣಿಸದೇ ತಿರಸ್ಕರಿಸಲಾಗುವುದು.
- ಈ ಎರಡು ಲಕೋಟೆಗಳನ್ನು ಒಂದು ದೊಡ್ಡ ಅಳತೆಯ ಲಕೋಟೆಯಲ್ಲಿ ಇರಿಸಿ ಈ ಕಛೇರಿಯ ವಿಳಾಸ ಬರೆದು, ಲಕೋಟೆಯ ಮೇಲ್ಭಾಗದಲ್ಲಿ ಅಲ್ಪಾವಧಿ ಟೆಂಡರ್ ಸಲ್ಲಿಸುವ ವಿವರ ನಮೂದಿಸಿ, ನಂತರ ಮೊಹರ್ ಮಾಡಿ ದಿನಾಂಕ: 15.06.2013 ರಂದು ಮಧ್ಯಾಹ್ನ 1:<u>00</u> ಗಂಟೆಯೊಳಗೆ ನಿರ್ದೇಶಕರು, ವಿಮ್ಸ್, ಬಳ್ಳಾರಿ ಇವರ ಕಛೇರಿಯಲ್ಲಿರುವ ಟೆಂಡರ್ ಬಾಕ್ಸ್‌ನಲ್ಲಿ ಹಾಕುವುದು
- ಅಲ್ಪಾವಧಿ ಟೆಂಡರ್ ಸ್ವೀಕೃತಿ ದಿನಾಂಕವನ್ನು ವಿಸ್ತರಿಸುವ ಅಥವಾ ರದ್ದುಪಡಿಸುವ ಅಧಿಕಾರವನ್ನು ಟೆಂಡರ್ ಆಹ್ವಾನಿಸುವ ಪ್ರಾಧಿಕಾರ ಹೊಂದಿರುತ್ತದೆ.

**9. <u>ಅಲ್ಪಾವಧಿ ಟೆಂಡರ್ ತೆರೆಯುವುದು ಮತ್ತು ಮೌಲ್ಯಮಾಪನ ಮಾಡುವುದು :</u>**

ಅಲ್ಪಾವಧಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕದಂದು ಅಥವಾ ನಿಗಧಿಪಡಿಸಿದ ದಿನದಂದು ಹಾಜರಿರುವ ಟೆಂಡರ್‌ದಾರರ ಸಮಕ್ಷಮದಲ್ಲಿ ತಾಂತ್ರಿಕ ಲಕೋಟೆಯನ್ನು ತೆರೆಯಲಾಗುವುದು. ತಾಂತ್ರಿಕ ಬಿಡ್‌ನಲ್ಲಿ ಯಶಸ್ವಿಯಾದ ಟೆಂಡರ್‌ದಾರರ ಹಣಕಾಸು ಬಿಡ್‌ಗಳನ್ನು ಮಾತ್ರ ತೆರೆಯಲಾಗುವುದು.

- ಈ ತಾಂತ್ರಿಕ ಲಕೋಟೆಯನ್ನು ತೆರೆದು ಟೆಂಡರ್ ನಿಬಂಧನೆಗಳು ಮತ್ತು ಟೆಂಡರ್‌ದಾರರು ಒದಗಿಸುವ ದಾಖಲಾತಿಗಳನ್ನು ಪರಿಶೀಲಿಸಿ ಮೌಲ್ಯಮಾಪನ ಮಾಡಲಾಗುವುದು.
- ಎಲ್ಲಾ ರೀತಿಯಲ್ಲೂ ಸರಿಯಾಗಿರುವ ತಾಂತ್ರಿಕ ಟೆಂಡರ್‌ಗಳನ್ನು ಮಾತ್ರ ಒಪ್ಪಿಕೊಂಡು ಅವುಗಳಿಗೆ ಸಂಬಂಧಿಸಿದಂತೆ ಆರ್ಥಿಕ ಲಕೋಟೆಗಳನ್ನು ನಿಗಧಿತ ದಿನಾಂಕದಲ್ಲಿ ಹಾಜರಾಗುವ ಟೆಂಡರ್‌ದಾರರ ಸಮಕ್ಷಮದಲ್ಲಿ ತೆರೆಯಲಾಗುವುದು.

**10. <u>ಟೆಂಡರ್ ಅವಾರ್ಡ್ ಮಾಡುವುದು :</u>**

1) ಆರ್ಥಿಕ ಬಿಡ್‌ನಲ್ಲಿ ಹೇಳಿರುವ ಅಂಶದ ಮೇಲೆ ಅತೀ ಕಡಿಮೆ ದರವನ್ನು ನಮೂದಿಸಿದ ಟೆಂಡರ್‌ದಾರರನ್ನು ಯಶಸ್ವಿ ಟೆಂಡರ್‌ದಾರರೆಂದು ಪರಿಗಣಿಸಿ ಅವರಿಗೆ ಕಾರ್ಯಾದೇಶ ನೀಡಲಾಗುವುದು. ಅವಶ್ಯವಿದ್ದಲ್ಲಿ ಈ ಕಡಿಮೆ ದರ ನಮೂದಿಸಿದ ಟೆಂಡರ್‌ದಾರರೊಡನೆ ದರ ನಿಗಧಿಗಾಗಿ ನೆಗೋಷಿಯೇಷನ್ ಮಾಡಲು ಟೆಂಡರ್ ಕರೆದಿರುವ ಪ್ರಾಧಿಕಾರಕ್ಕೆ ಅಧಿಕಾರವಿರುತ್ತದೆ.
2) ಟೆಂಡರ್‌ಗಳ ಆರ್ಥಿಕ ಲಕೋಟೆಗಳನ್ನು ತೆರೆದ ನಂತರ ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರ ಟೆಂಡರ್ ಕರೆದಿರುವ ಪ್ರಾಧಿಕಾರ ಹೊಂದಿರುತ್ತದೆ.
3) ಟೆಂಡರ್ ಅವಧಿಯು **12** ತಿಂಗಳಾಗಿದ್ದು, ಈ ಪೂರ್ಣ ಅವಧಿಗೆ ಸಿಬ್ಬಂದಿಗಳ ಸೇವೆ ನೀಡಬೇಕು.
4) ಟೆಂಡರ್ ಕರೆದ **90** ದಿನಗಳಲ್ಲಿ ಕಾರ್ಯಾದೇಶ ನೀಡದಿದ್ದಲ್ಲಿ ಅಥವಾ ಒಂದು ವೇಳೆ ಟೆಂಡರ್‌ದಾರರು ಲಿಖಿತ ಒಪ್ಪಿಗೆ ನೀಡಿದುದರ ಮೇರೆಗೆ ವಿಸ್ತರಿಸಿದ ಅವಧಿಯಲ್ಲಿ ಕಾರ್ಯಾದೇಶ ನೀಡದಿದ್ದಲ್ಲಿ ತಂತಾನೆ ಟೆಂಡರ್ ರದ್ದಾಗುತ್ತದೆ.

**11. <u>ಟೆಂಡರ್ ಗುತ್ತಿಗೆಯ ಕರಾರು ಒಪ್ಪಂದವನ್ನು ಸಹಿ ಮಾಡುವುದು :</u>**

ಯಶಸ್ವಿ ಟೆಂಡರ್‌ದಾರರಿಗೆ ಕಾರ್ಯಾದೇಶ ನೀಡಲಾಗುವುದು. ಕಾರ್ಯಾದೇಶ ಪಡೆದ ನಂತರ ಇಲಾಖೆಯೊಂದಿಗೆ ನಿಗಧಿತ ನಮೂನೆಯಲ್ಲಿ ಟೆಂಡರ್ ನಿಬಂಧನೆಗಳೊಂದಿಗೆ ಹಾಗೂ ಪ್ರತ್ಯೇಕವಾಗಿ ವಿಧಿಸಬಹುದಾದ ಷರತ್ತುಗಳನ್ನೊಳಗೊಂಡ ಕರಾರು ಪತ್ರಕ್ಕೆ ಸಹಿ ಮಾಡತಕ್ಕದ್ದು.

**ಅ) <u>ಟೆಂಡರ್‌ದಾರರಿಗೆ ಇರಬೇಕಾದ ಅರ್ಹತೆಗಳು:</u>**

ಟೆಂಡರ್‌ದಾರರು ಮಾನವ ಹೊರಸಂಪನ್ಮೂಲ ಸೇವೆಯನ್ನು ಒದಗಿಸುವ ಸಂಬಂಧ ಈ ಕೆಳಕಂಡ ಕಾಯ್ದೆಗಳ ಪ್ರಕಾರ ಕಡ್ಡಾಯವಾಗಿ ಕನಿಷ್ಟ 3 ವರ್ಷಗಳ ಹಿಂದೆ ನೋಂದಣಿ ಮಾಡಿರಬೇಕು.

1. ಕಾರ್ಮಿಕ ಕಾಯ್ದೆ.
2. ಕಾರ್ಮಿಕ ಭವಿಷ್ಯ ನಿಧಿ (ಇ.ಪಿ.ಎಫ್) ಕಾಯ್ದೆ.
3. ರಾಜ್ಯ ಕಾರ್ಮಿಕ ವಿಮಾ (ಇ.ಎಸ್.ಐ) ಕಾಯ್ದೆ.
4. ಆದಾಯ ತೆರಿಗೆ ಕಾಯ್ದೆ.
5. ಸೇವಾ ತೆರಿಗೆ ಕಾಯ್ದೆ.
6. PAN ಕಾರ್ಡ್ ಹೊಂದಿರಬೇಕು.

7. ಟೆಂಡರ್ದಾರರು ಮಾನವ ಹೊರಸಂಪನ್ಮೂಲ ಏಜೆನ್ಸಿಯಾಗಿ ಆಸ್ಪತ್ರೆ ಹಾಗೂ ಸಂಸ್ಥೆಗಳಲ್ಲಿ ಗ್ರೂಪ್–'ಡಿ' ಸೇವೆ ಪೂರೈಕೆ ಮಾಡಿರುವ ಕುರಿತು ಸಂಬಂಧಪಟ್ಟ ಅಧಿಕಾರಿಗಳಿಂದ ಅನುಭವ ಪ್ರಮಾಣ ಪತ್ರ ಪಡೆದು ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ ಸಲ್ಲಿಸಬೇಕು.
೮. ಈ ಸಂಬಂಧ ಕಳೆದ 3 ವರ್ಷಗಳಲ್ಲಿ ವ್ಯವಹರಿಸಿರುವ ವಾರ್ಷಿಕ ವಹಿವಾಟುಗಳ ವಿವರಗಳು ಮತ್ತು ದಾಖಲೆಗಳ ಪ್ರತಿಯನ್ನು ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ ಸಲ್ಲಿಸಬೇಕು.
೯. ಟೆಂಡರ್‌ದಾರರು ಟೆಂಡರ್‌ಗಿಟ್ಟ ಮೊತ್ತದ ಶೇ.80% ರಷ್ಟು ಸಾಲ್ವೆನ್ಸಿ ಪ್ರಮಾಣ ಪತ್ರವನ್ನು 2013–14ನೇ ಸಾಲಿನಲ್ಲಿ ರಾಷ್ಟ್ರೀಕೃತ ಬ್ಯಾಂಕ್ ಮೂಲಕ ಪಡೆದು ಸಲ್ಲಿಸತಕ್ಕದ್ದು.

ಮೇಲ್ಕಂಡ ಎಲ್ಲಾ ಕಾಯ್ದೆಗಳಲ್ಲಿ ನೋಂದಣಿ ಮಾಡಿದ ಬಗ್ಗೆ ನೋಂದಣಿ ಪ್ರಮಾಣ ಪತ್ರಗಳನ್ನು ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ ಸಲ್ಲಿಸಬೇಕು. ಈ ಮೇಲಿನ ಸೂಕ್ತ ಅರ್ಹತೆಗಳು ಇಲ್ಲದಿದ್ದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು.

**ಆ) ಟೆಂಡರ್‌ದಾರರ ಜವಾಬ್ದಾರಿಗಳು:**

1. ಟೆಂಡರ್‌ದಾರರು ಅಲ್ಪಾವಧಿ ಟೆಂಡರ್ ಷೆಡ್ಯೂಲ್‌ನಲ್ಲಿ ಹೇಳಿರುವಂತೆ ವಿಮ್ಸ್ ಸಂಸ್ಥೆಯ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಮತ್ತು ಆಸ್ಪತ್ರೆಗಳಲ್ಲಿ ಸಿಬ್ಬಂದಿಗಳ ಸೇವೆಯನ್ನು ಒದಗಿಸಬೇಕು.
2. ಸರ್ಕಾರಿ ಸಂಸ್ಥೆಗಳಲ್ಲಿ ಹಾಗೂ ಸರ್ಕಾರಿ ಆಸ್ಪತ್ರೆಗಳಲ್ಲಿ ಕೆಲಸ ಮಾಡಿದ 2 ವರ್ಷ ಅನುಭವ ಹೊಂದಿದ ಸೇವಾ ಪ್ರಮಾಣ ಪತ್ರವನ್ನು ಒದಗಿಸಬೇಕು.
3. ಟೆಂಡರ್‌ದಾರರು ಒಂದು ವೇಳೆ ಸಾಕಷ್ಟು ಸಂಖ್ಯೆಯಲ್ಲಿ ಅಭ್ಯರ್ಥಿಗಳನ್ನು ಒದಗಿಸಲು ಸಾಧ್ಯವಾಗದಿದ್ದಲ್ಲಿ, ಸಂಸ್ಥೆಯು ಸೂಕ್ತ ಅಭ್ಯರ್ಥಿಗಳನ್ನು ಬೇರೆ ಮೂಲಗಳಿಂದ ಒದಗಿಸಲು ಅಧಿಕಾರ ಹೊಂದಿರುತ್ತದೆ. ಈ ರೀತಿ ಟೆಂಡರ್ ಕರೆದಿರುವ ಸಂಸ್ಥೆಯ ಪ್ರಾಧಿಕಾರವು ಬೇರೆ ಮೂಲಗಳಿಂದ ಆಯ್ಕೆ ಮಾಡಿದ ಬೇರೆ ಅಭ್ಯರ್ಥಿಗಳನ್ನು ಯಶಸ್ವಿ ಟೆಂಡರ್‌ದಾರರು ತನ್ನ ಏಜೆನ್ಸಿಯಲ್ಲಿ ಅವರನ್ನು ನೋಂದಣಿ ಮಾಡಿಕೊಂಡು ಅವರ ಸೇವೆಯನ್ನು ತನ್ನ ಏಜೆನ್ಸಿ ಮೂಲಕ ಸಂಸ್ಥೆಗೆ ಒದಗಿಸಬೇಕು.
4. ಏಜೆನ್ಸಿಯು ಹೆಚ್ಚು ಅನುಭವವುಳ್ಳ ಸೇವಾ ಸಿಬ್ಬಂದಿಯನ್ನು ಸಂಸ್ಥೆಗೆ ನೀಡಬೇಕು.
5. ಈ ರೀತಿ ನೇಮಕಗೊಂಡ ಹೊರಸಂಪನ್ಮೂಲ ಸಿಬ್ಬಂದಿಯು ಹಿರಿಯ ಇಲಾಖಾ ಅಧಿಕಾರಗಳ ವ್ಯಾಪ್ತಿಯಲ್ಲಿ ಅವರ ಮಾರ್ಗದರ್ಶನದಂತೆ ಸೇವೆ ಸಲ್ಲಿಸುವಂತಿರಬೇಕು.
6. ಯಾವುದೇ ಕಾರಣಕ್ಕೂ ಸಂಸ್ಥೆಯ ಅಧಿಕಾರಿಗಳ ಗಮನಕ್ಕೆ ತರದೆ ಏಜೆನ್ಸಿಯು ತನ್ನ ಸಿಬ್ಬಂದಿಗಳನ್ನು ಹಿಂಪಡೆಯಬಾರದು. ಇದನ್ನು ಟೆಂಡರ್ ಷರತ್ತುಗಳ ಉಲ್ಲಂಘನೆ ಎಂದು ಪರಿಗಣಿಸಲಾಗುವುದು.
7. ಟೆಂಡರ್‌ದಾರರು ನಿಯೋಜಿಸುವ ಸಿಬ್ಬಂದಿ ವರ್ಗದವರು ಪ್ರತಿ ತಿಂಗಳು ಒಂದು ರಜೆಯನ್ನು ಪಡೆಯಲು ಅರ್ಹರಾಗಿರುತ್ತಾರೆ. ಆದರೆ 15 ದಿನಗಳಿಗಿಂತ ಕಡಿಮೆ ಕಾಲ ರಜೆ ಹೋದಲ್ಲಿ ಅವರ ವೇತನವನ್ನು ಕಡಿತಗೊಳಿಸಲಾಗುವುದು. ಒಂದು ವೇಳೆ 15 ದಿನಕ್ಕಿಂತ ಹೆಚ್ಚು ರಜೆ ಪಡೆದಲ್ಲಿ ಬದಲಿ ಸಿಬ್ಬಂದಿಯ ವ್ಯವಸ್ಥೆಯನ್ನು ಟೆಂಡರ್‌ದಾರರು ಮಾಡಬೇಕು.
8. ಟೆಂಡರ್‌ದಾರರು ಒದಗಿಸುವ ಸಿಬ್ಬಂದಿಗಳು ಸೇವಾ ಅವಧಿಯಲ್ಲಿ ಯಾವುದೇ ಅಪಘಾತ, ಅವಘಡ, ಪ್ರಾಣಾಪಾಯ ಆಕಸ್ಮಿಕ ಘಟನೆಗಳು ಸಂಭವಿಸಿದ್ದಲ್ಲಿ ಹಾಗೂ ಮರಣ ಹೊಂದಿದ್ದಲ್ಲಿ ಅದಕ್ಕೆ ಟೆಂಡರ್‌ದಾರರೇ ಸೂಕ್ತ ಹೊಣೆಗಾರರಾಗಿದ್ದು, ವರ್ಕ್ಸ್‌ಮೆನ್ ಕಾಂಪೆನ್ಸೇಷನ್ ಆಕ್ಟ್ 1923 ರ ಪ್ರಕಾರ ಸಂದಾಯ ಮಾಡಬೇಕಾಗಿರುವ ಪರಿಹಾರ ನೀಡಲು ಬದ್ಧರಾಗಿರುತ್ತಾರೆ. ಇಲಾಖೆಯು ಈ ಬಗ್ಗೆ ಯಾವುದೇ ಜವಾಬ್ದಾರಿ ಹೊಂದಿರುವುದಿಲ್ಲ.
9. ಟೆಂಡರ್‌ದಾರರು ನಿಯೋಜಿಸುವ ಸಿಬ್ಬಂದಿಗಳು ಸಂಸ್ಥೆಯಲ್ಲಿ ವಿಭಾಗದಲ್ಲಿ/ವಾರ್ಡ್‌ಗಳಲ್ಲಿ/ಕಛೇರಿಗಳಲ್ಲಿ/ ಆಸ್ಪತ್ರೆಗಳಲ್ಲಿ ಹಾಗೂ ಸಂಸ್ಥೆಯ ಯಾವುದೇ ಸ್ಥಳಗಳಲ್ಲಿ ನಷ್ಟ ಉಂಟು ಮಾಡಿದಲ್ಲಿ ಅದನ್ನು ಟೆಂಡರ್‌ದಾರರೇ ಭರಿಸಬೇಕಾಗುತ್ತದೆ.
10. ಟೆಂಡರ್‌ದಾರರು ವಿಮ್ಸ್ ಸಂಸ್ಥೆಗೆ ನಿಯೋಜಿಸುವ ಸಿಬ್ಬಂದಿಗಳ ವಿಳಾಸ, ಭಾವ ಚಿತ್ರಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ನೀಡತಕ್ಕದ್ದು.
11. ಅವರುಗಳು ಉತ್ತಮ ನಡತೆ ಹೊಂದಿರತಕ್ಕದ್ದು. ಪಾನಮತ್ತರಾಗಿರುವುದು, ಭಂಗಿ, ಸಿಗರೇಟು ಸೇದುವುದು ನಿಷೇಧಿಸಿದೆ.

12. ಸ್ವಚ್ಛತಾ ಮತ್ತು ನೈರ್ಮಲ್ಯ ಮತ್ತು ಅನುಚರರ ಏಜೆನ್ಸಿಯು ಸಿಬ್ಬಂದಿಗಳಲ್ಲಿ 60% ಕ್ಕಿಂತ ಹೆಚ್ಚು ಪುರುಷರು ಮತ್ತು 40% ಕ್ಕಿಂತ ಕಡಿಮೆ ಮಹಿಳೆಯರಿಗೆ ಅವಕಾಶವಿರತಕ್ಕದ್ದು. ಅಂಗೀಕೃತವಾದ ಟೆಂಡರ್‌ದಾರರು ಈ ಕೆಳಕಂಡ ದಾಖಲೆಗಳನ್ನು ತಪ್ಪದೇ ಒದಗಿಸಬೇಕು.

    1. ಸ್ವಚ್ಛತಾ ಮತ್ತು ನೈರ್ಮಲ್ಯ ಮತ್ತು ಅನುಚರರ ಮೆಡಿಕಲ್ ಫಿಟ್‌ನೆಸ್ ಸರ್ಟಿಫಿಕೇಟ್.
    2. ಸ್ವಚ್ಛತಾ ಮತ್ತು ನೈರ್ಮಲ್ಯ ಮತ್ತು ಅನುಚರರ ಏಜೆನ್ಸಿಯು ಒದಗಿಸುವ ಸಿಬ್ಬಂದಿಯ ಬಯೋಡಾಟ– ಭಾವಚಿತ್ರ–ಸಮೇತ.
    3. ಸ್ವಚ್ಛತಾ ಮತ್ತು ನೈರ್ಮಲ್ಯ ಮತ್ತು ಅನುಚರರ ಏಜೆನ್ಸಿಯು ಮ್ಯಾನೇಜ್‌ಮೆಂಟ್ ತಮ್ಮ ದಿನಚರಿಗಳನ್ನು ಸಕಾಲದಲ್ಲಿ ತಪ್ಪದೇ ನಿರ್ವಹಿಸತಕ್ಕದ್ದು. ಯಾವುದೇ ಕಾರಣಕ್ಕೂ ಸಿಬ್ಬಂದಿ ತಮ್ಮ ಕರ್ತವ್ಯ ನಿರ್ವಹಿಸಲು ಸಾಧ್ಯವಾಗದಿದ್ದ ಪಕ್ಷದಲ್ಲಿ ಟೆಂಡರ್‌ದಾರರು ಅಂತಹ ಸಿಬ್ಬಂದಿಯನ್ನು ಬದಲಾಯಿಸಿ ಬೇರೆ ಸಿಬ್ಬಂದಿಯನ್ನು ಭರ್ತಿ ಮಾಡತಕ್ಕದ್ದು.
    4. ಎಂತಹ ಸಂದರ್ಭದಲ್ಲೂ ಸಹ ಟೆಂಡರ್‌ದಾರರು ಸ್ವಚ್ಛತಾ ಮತ್ತು ನೈರ್ಮಲ್ಯ ಮತ್ತು ಅನುಚರರ ಏಜೆನ್ಸಿಯು ಸಿಬ್ಬಂದಿಗಳ 10%ಕ್ಕಿಂತ ಹೆಚ್ಚು ಗೈರುಹಾಜರಾದ ಪಕ್ಷದಲ್ಲಿ ಟೆಂಡರ್‌ದಾರರೇ ಬಾಧ್ಯಸ್ಥರು. ಹೀಗೆ 2–3 ತಿಂಗಳು ಗೈರು ಹಾಜರಾದ ಪಕ್ಷದಲ್ಲಿ ಯಾವ ತರಹದ ನೋಟೀಸು ನೀಡದೇ ಟೆಂಡರನ್ನು ರದ್ದುಪಡಿಸಲಾಗುವುದು. ಇದಕ್ಕೆ ಟೆಂಡರುದಾರರೇ ಬಾಧ್ಯಸ್ಥರು. ಈ ಕುಂದು ಕೊರತೆಗೆ ಗುತ್ತಿಗೆದಾರರೇ ಜವಾಬ್ದಾರರು ಎಂದು ತೀರ್ಮಾನಿಸಿ ಗುತ್ತಿಗೆಯನ್ನು ರದ್ದುಪಡಿಸಲು ಗುತ್ತಿಗೆದಾರರ ಒಪ್ಪಿಗೆ ಇದೆಯೆಂದು ತೀರ್ಮಾನಿಸಲಾಗುವುದು.

13. ಟೆಂಡರುದಾರರು ನಿಯೋಜಿಸಿಕೊಳ್ಳಲಿರುವ ಸ್ವಚ್ಛತಾ ಮತ್ತು ನೈರ್ಮಲ್ಯ ಅನುಚರರಿಗೆ ಕನಿಷ್ಠ 18 ವರ್ಷ ಹಾಗೂ ಗರಿಷ್ಠ 45ವರ್ಷ ವಯಸ್ಸಾಗಿರಬೇಕು ಅಲ್ಲದೇ ಸ್ವಚ್ಛತಾ ಸಿಬ್ಬಂದಿಗಳು ಕನ್ನಡ ಭಾಷೆ ಮಾತಾಡಲು ಹಾಗೂ ಬರೆಯಲು ತಿಳಿದವರಾಗಿರಬೇಕು ಹಾಗೂ 18 ವರ್ಷ ದೊಳಗಿನವರನ್ನು ನೇಮಿಸಿ (Child Labour Act) ಬಾಲ ಕಾರ್ಮಿಕ ಕಾಯ್ದೆ ಆಡಿಯಲ್ಲಿ ಸಿಕ್ಕಿ ಹಾಕಿಕೊಂಡರೆ, ಗುತ್ತಿಗೆದಾರರೇ ಅದಕ್ಕೆ ಪೂರ್ಣ ಜವಾಬ್ದಾರರು.

14. ಸ್ವಚ್ಛತಾ ಮತ್ತು ನೈರ್ಮಲ್ಯತೆ ಕಾರ್ಯ ನಿರ್ವಹಿಸುವ ಅನುಚರರ ಮಾಸಿಕ ಮಜೂರಿಯ ಮೊತ್ತವನ್ನು ಕಡ್ಡಾಯವಾಗಿ ಆಯಾ ಸಿಬ್ಬಂದಿಗಳ ಬ್ಯಾಂಕ್ ಉಳಿತಾಯ ಖಾತೆಗೆ ಜಮಾ ಮಾಡಿ ಅದರ ಒಂದು ಪ್ರತಿಯನ್ನು ಪ್ರತಿ ತಿಂಗಳ ಬಿಲ್‌ಗೆ ಲಗತ್ತಿಸತಕ್ಕದ್ದು. ಈ ವಿಧಾನ ವನ್ನು ತಪ್ಪದೇ ಪಾಲಿಸುವುದಾಗಿ ಮುಚ್ಚಳಿಕೆಯೊಂದನ್ನು ಟೆಂಡರ್ ಅರ್ಜಿ ಜೊತೆಗೆ ಲಗತ್ತಿಸ ತಕ್ಕದ್ದು. ಬಿಲ್ ಜೊತೆಗೆ ಲಗತ್ತಿಸದಿದ್ದಲ್ಲಿ ಮಜೂರಿ ಪಾವತಿಸಲಾಗುವುದಿಲ್ಲ. ಸ್ವಚ್ಛತಾ ಮತ್ತು ನೈರ್ಮಲ್ಯ ಮತ್ತು ಅನುಚರರ ಏಜೆನ್ಸಿಯ ಸಿಬ್ಬಂದಿಗಳು ಈ ಕೆಳಗಿನ ಹಾಗೂ ಈ ಟೆಂಡರ್‌ಗಳಲ್ಲಿರುವ ಎಲ್ಲಕರಾರುಗಳನ್ನು ಪಾಲಿಸತಕ್ಕದ್ದು. ಈ ಸಂಸ್ಥೆಯ ಎಲ್ಲ ಕಟ್ಟಡಗಳು, ಆಸ್ಪತ್ರೆ, ವಾರ್ಡುಗಳು, ಆವರಣಗಳು, ಬಯಲು ಜಾಗೆಗಳನ್ನು ಸ್ವಚ್ಛವಾಗಿಡುವ ಕೆಲಸವು ಸ್ವಚ್ಛತಾ ಸೇವೆಯ ಟೆಂಡರದಾರರು ಮತ್ತು ಅವರ ಸಿಬ್ಬಂದಿಯದು ಆಗಿರುತ್ತದೆ. ರೋಗಿಗಳನ್ನು ವಾರ್ಡು–ಮತ್ತು–ಓಟಿಗಳಿಂದ ಸ್ಥಳಾಂತರಿಸುವ ಸಂದರ್ಭದಲ್ಲಿ ಸೌಜನ್ಯತೆಯಿಂದ ವರ್ತಿಸಬೇಕು. ಎಲ್ಲ ಕಟ್ಟಡಗಳು ಹಾಗೂ ಸ್ಥಳಗಳಲ್ಲಿ ಸತತವಾಗಿ ಸ್ವಚ್ಛತೆಯನ್ನು ಕಾಯ್ದುಕೊಳ್ಳಬೇಕು. ಈ ಸಂಸ್ಥೆಯ ಎಲ್ಲಾ ವಿಭಾಗ/ಆಸ್ಪತ್ರೆ/ವಾರ್ಡು/ವಿದ್ಯಾರ್ಥಿ ನಿಲಯಗಳ ಶೌಚಾಲಯ/ ಕಕ್ಕಸು ಮತ್ತು ಸ್ನಾನದ ಕೊಠಡಿಗಳಲ್ಲಿ ದಿನದ 24ತಾಸುಗಳು ಸ್ವಚ್ಛತೆ ಮತ್ತು ನೈರ್ಮಲ್ಯ ಕೆಲಸವನ್ನು ನಿರಂತರವಾಗಿ ನಿರ್ವಹಿಸುತ್ತಿರಬೇಕು. ಸ್ವಚ್ಛತೆಗೆ ಬೇಕಾಗುವ ಪೊರಕೆ, ಫಿನೈಲ್, ಬ್ಲೀಚಿಂಗ್ ಪೌಡರ್, ಯಾಸಿಡ್, ಬ್ರಷ್‌ಗಳನ್ನು ಈ ಸಂಸ್ಥೆಯಿಂದ ಒದಗಿಸಲಾಗುತ್ತದೆ ಮತ್ತು ಸಂಸ್ಥೆಯಲ್ಲಿ ನೀರು ಸರಬರಾಜು ವ್ಯತ್ಯಯವಾದಲ್ಲಿ ತಾವೇ ನೀರು ಒದಗಿಸುವ ಏರ್ಪಾಡು ಮಾಡಿಕೊಂಡು ಸ್ವಚ್ಛತಾ ಮತ್ತು ನೈರ್ಮಲ್ಯತೆ ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸತಕ್ಕದ್ದು. ಸ್ವಚ್ಛತಾ ಕೆಲಸದ ಅನುಚರರು, ರೋಗಿಗಳು ಮತ್ತು ಅವರ ಸಹಾಯಕರಿಂದ ಯಾವುದೇ ರೀತಿಯ ಹಣ ಕೇಳಬಾರದು. ಇದರ ಬಗ್ಗೆ ರೋಗಿಗಳು ಹಾಗೂ ಅವರ ಸಹಾಯಕರಿಂದ ಮತ್ತು ವಿಮ್ಸ್ ಸಂಸ್ಥೆಯ ಸಿಬ್ಬಂದಿಯಿಂದ ಮೇಲ್ವಿಚಾರಕರಿಂದ ಹಾಗೂ ಅಧಿಕಾರಿಗಳಿಂದ ದೂರು ಬಂದಲ್ಲಿ ಆ ಸಿಬ್ಬಂದಿಯನ್ನು ತಕ್ಷಣವೇ ಬದಲಾಯಿಸಬೇಕು ಹಾಗೂ ಸಂಸ್ಥೆಯ ಆಸ್ತಿಯನ್ನು ಕಾಪಡಬೇಕು ಮತ್ತು ಹೊಸದಾಗಿ ಅಳವಡಿಸಿದ ಲೈಟ್ಸ್‌ಗಳನ್ನು, ನಳಗಳನ್ನು ಮತ್ತು ಇತರೆ ವಸ್ತುಗಳನ್ನು ಕಳವು ಮಾಡಬಾರದು, ಇದಕ್ಕಾಗಿ ಏಜನ್ಸಿಗೆ ರೂ.2000/– ದಿಂದ ರೂ.5000/–ದ ವರೆಗೆ ದಂಡ ವಿಧಿಸಲಾಗುವುದು. ಆಹಾರ, ಔಷಧಿ ಸಾಮಗ್ರಿಗಳನ್ನು ಸಾಗಿಸುವಾಗ, ವಿತರಣೆ ಮಾಡುವಾಗ ರೋಗಿಗಳ ಜೊತೆಯಲ್ಲಿ ಸೌಜನ್ಯತೆಯಿಂದ ವರ್ತಿಸತಕ್ಕದ್ದು. ಅವಶ್ಯವೆನಿಸಿದಲ್ಲಿ ಸಂಬಂಧಿಸಿದ ಸಿಬ್ಬಂದಿಗೆ ಸಹಾಯ ಮಾಡಬೇಕು. ಅನವಶ್ಯವಾಗಿ ಉರಿಯುವ ಲೈಟುಗಳನ್ನು, ಸೋರುವ ನಳಗಳನ್ನು ಬಂದ್ ಮಾಡಬೇಕು. ಅಹಿತಕರ ಘಟನೆಗಳ ಕುರಿತು ಕೂಡಲೇ ಮೇಲಾಧಿಕಾರಿಗಳಿಗೆ ತಿಳಿಸಬೇಕು.

15. ಟೆಂಡರುದಾರರನ್ನು ಸಂಪರ್ಕಿಸಲು ಅನುಕೂಲವಾಗುವಂತೆ ಬಳ್ಳಾರಿಯಲ್ಲಿ ಅವರ ಕಛೇರಿ ಅಥವಾ ಶಾಖಾ ಕಛೇರಿ ಹೊಂದಿರತಕ್ಕದ್ದು.

16. ಟೆಂಡರುಗಳನ್ನು ಹಾಕುವ ಮುಂಚೆ ಟೆಂಡರುದಾರರು ವಿವಿಧ ಕೆಲಸಗಳಿಗೆ ಸಂಬಂಧಿಸಿದ ಕಟ್ಟಡಗಳನ್ನು ಹಾಗೂ ಸ್ಥಳಗಳನ್ನು ಕಚೇರಿ ಅವಧಿಯಲ್ಲಿ ವೀಕ್ಷಿಸಬಹುದು.
17. ಟೆಂಡರ್‌ದಾರರು ಒದಗಿಸಿದ ಅನುಚರರು ರೋಗಿಗಳ ಜೊತೆ, ಸಾರ್ವಜನಿಕರ ಜೊತೆ ಮತ್ತು ಈ ಸಂಸ್ಥೆಯ ಸಿಬ್ಬಂದಿಯವರೊಡನೆ ಸೌಜನ್ಯದಿಂದ ವರ್ತಿಸುವಂತೆ ನೋಡಿಕೊಳ್ಳಲು ಗುತ್ತಿಗೆದಾರರೇ ಜವಾಬ್ದಾರರಾಗಿರುತ್ತಾರೆ.
18. ಸ್ವಚ್ಛತಾ ಮತ್ತ ನೈರ್ಮಲ್ಯತೆ ಅನುಚರರಿಗೆ ಮತ್ತು ಗುತ್ತಿಗೆದಾರರ ಮಧ್ಯೆ ಯಾವದೇ ತರಹದ ಭಿನ್ನಾಭಿಪ್ರಾಯ, ಸಮಸ್ಯೆ ಬಂದಲ್ಲಿ ಅದಕ್ಕೆ ವಿಮ್ಸ್ ಸಂಸ್ಥೆ ಜವಾಬ್ದಾರಿಯಲ್ಲ.
19. ಟೆಂಡರ್‌ದಾರರು ಯಾವುದೇ ಹಂತದಲ್ಲಿ ಯಾವುದೇ ಕಾರಣಕ್ಕಾಗಿ ನ್ಯಾಯಾಲಯಕ್ಕೆ ಅಪೀಲು ಹೋಗುವುದಿಲ್ಲವೆಂದು ಮುಚ್ಚಳಿಕೆ ಸಲ್ಲಿಸಬೇಕು.
20. ಯಶಸ್ವಿ ಟೆಂಡರ್‌ದಾರರು 10% ಭದ್ರತಾ ಠೇವಣಿಯನ್ನು ರಾಷ್ಟ್ರೀಕೃತ ಬ್ಯಾಂಕ್‌ನಿಂದ ಪಡೆದ ಬ್ಯಾಂಕ್ ಗ್ಯಾರಂಟಿಯನ್ನು ಸಲ್ಲಿಸತಕ್ಕದ್ದು ಹಾಗೂ ಸದರಿ ಬ್ಯಾಂಕ್ ಗ್ಯಾರಂಟಿಯು ಗುತ್ತಿಗೆ ಅವಧಿಯು ಪ್ರಾರಂಭದ ದಿನದಿಂದ ಅವಧಿ ಪೂರ್ಣಗೊಳ್ಳುವವರಿಗೆ ಇರತಕ್ಕದ್ದು.
21. ಬಯೋಮೆಟ್ರಿಕ್ ಉಪಕರಣವನ್ನು ಟೆಂಡರುದಾರರೇ ಸ್ವಂತ ವೆಚ್ಚದಲ್ಲಿ ಅಳವಡಿಸಿ ನಿರ್ವಹಣೆ ಮಾಡಬೇಕು.
22. ಸಮವಸ್ತ್ರವನ್ನು ಟೆಂಡರುದಾರರೇ ಸ್ವಂತ ವೆಚ್ಚದಲ್ಲಿ ಅನುಚರರಿಗೆ ಕೊಡಬೇಕು.
23. ಸದರಿ ಸ್ವಚ್ಛತಾ ನೈರ್ಮಲ್ಯತೆ ಅನುಚರರಿಗೆ ಕರ್ತವ್ಯ ನಿರ್ವಹಿಸುತ್ತಿರುವ ಸಂದರ್ಭದಲ್ಲಿ ಏಜೆನ್ಸಿಯ ಗುರುತಿನ ಚೀಟಿಯನ್ನು ಸಮವಸ್ತ್ರದಲ್ಲಿ ಧರಿಸತಕ್ಕದ್ದು.

**12. (ಅ) <u>ಸಿಬ್ಬಂದಿ ವೇತನ ಜವಾಬ್ದಾರಿ:</u>**

1) ಇಲಾಖೆಯು ವಿವಿಧ ವರ್ಗದ ಸಿಬ್ಬಂದಿಗಳಿಗೆ ನೀಡುವ ವೇತನ ಇ.ಎಸ್.ಐ. ಮತ್ತು ಇ.ಪಿ.ಎಫ್. ಕಡಿತಗಳು, ಸೇವಾ ತೆರಿಗೆ ಕಡಿತಗಳ ವಿವರಗಳನ್ನು ಈ ಟೆಂಡರ್ ದಾಖಲೆಗಳ ಅನುಬಂಧ (2) ರಲ್ಲಿ ನೀಡಲಾಗಿದೆ. ಅದರಂತೆ ಪ್ರತಿ ಸಿಬ್ಬಂದಿಗೆ ಅವರ ಹುದ್ದೆ ಹೆಸರಿನ ಮುಂದೆ ತೋರಿಸಿರುವ ವಿವರಗಳಂತೆ ಮನೆಗೆ ತೆಗೆದುಕೊಂಡು ಹೋಗುವ ವೇತನ (Take home salary) ವನ್ನು ಬಯೋಮೆಟ್ರಿಕ್ ಹಾಜರಾತಿ ಆಧಾರದ ಮೇಲೆ ಸಂಬಂಧಪಟ್ಟ ಸಿಬ್ಬಂದಿಗಳಿಗೆ ಪ್ರತಿ ತಿಂಗಳು 5ನೇ ತಾರೀಖಿನೊಳಗೆ ಕಡ್ಡಾಯವಾಗಿ ಚೆಕ್ ಮೂಲಕ ಅಥವಾ ಬ್ಯಾಂಕ್ ಖಾತೆಯ ಮೂಲಕ ವೇತನವನ್ನು ಟೆಂಡರ್‌ದಾರರು ಪಾವತಿಸಬೇಕು.

2) ಸಿಬ್ಬಂದಿಯ ವೇತನ ಮತ್ತು ಇತರ ಕಡಿತಗಳನ್ನು ಟೆಂಡರ್‌ದಾರರು ಪೂರ್ವಭಾವಿಯಾಗಿ ತಮ್ಮ ಸ್ವಂತ ಹಣದಿಂದ ಭರಿಸಿ ಆ ಕೆಲಸದ ತಿಂಗಳು ಮುಗಿದ ನಂತರ ಇಲಾಖೆಗೆ ಬಿಲ್ ಸಲ್ಲಿಸುವ ಮುಖಾಂತರ ಹಣದ ಮರುಪಾವತಿ ಪಡೆಯತಕ್ಕದ್ದು.
3) ಪ್ರತಿ ಸಿಬ್ಬಂದಿಗೆ ಆಗುವ ವೇತನದ ವೆಚ್ಚವನ್ನು ಇಲಾಖಾವತಿಯಿಂದ ನೀಡಲಾಗುವುದು. ಹಾಗೂ ಎಂಪ್ಲಾಯರ್ಸ್ ವಂತಿಕೆಯಾದ ಇ.ಪಿ.ಎಫ್., ಇ.ಎಸ್.ಐ. ಸೇವಾ ತೆರಿಗೆ ಮತ್ತು ಸೇವಾ ವೆಚ್ಚವನ್ನು ಇಲಾಖೆ ನೀಡುವುದು.
4) ಸಿಬ್ಬಂದಿಯ ವೇತನದಲ್ಲಿ ನೌಕರನ ವಂತಿಕೆಯಿಂದ ಇ.ಪಿ.ಎಫ್., ಇ.ಎಸ್.ಐ. ಮತ್ತು ವೃತ್ತಿಪರ ತೆರಿಗೆಗಳನ್ನು ಮಾತ್ರ ಕಡಿತಗೊಳಿಸತಕ್ಕದ್ದು. ರೂ. 6,500/–ಕ್ಕಿಂತ ಹೆಚ್ಚು ವೇತನ ಪಡೆಯುವವರಿಗೆ ಇ.ಪಿ.ಎಫ್. ಕಡ್ಡಾಯವಲ್ಲ.
5) ಪ್ರತಿಯೊಬ್ಬ ಸಿಬ್ಬಂದಿಯ ಹೆಸರಿನಲ್ಲಿ ಇ.ಪಿ.ಎಫ್. ಮತ್ತು ಇ.ಎಸ್.ಐ. ಖಾತೆಗಳನ್ನು ತೆರೆದು ಆ ಖಾತೆಗಳಲ್ಲಿ ಸಿಬ್ಬಂದಿಯ ಭಾಗ ಮತ್ತು ಎಂಪ್ಲಾಯರ್ಸ್ ಭಾಗದ ಹಣವನ್ನು ಪ್ರತಿ ತಿಂಗಳು ಟೆಂಡರ್‌ದಾರರು ತಪ್ಪದೇ ಜಮಾ ಮಾಡಬೇಕು.

6) ಸಿಬ್ಬಂದಿ ವೇತನವನ್ನು ಸಂಬಂಧಪಟ್ಟ ನೌಕರರ ಬ್ಯಾಂಕ್ ಖಾತೆಗೆ ನೇರವಾಗಿ ಟೆಂಡರ್‌ದಾರು/ಗುತ್ತಿಗೆದಾರರು ಅವರ ಹಾಜರಾತಿಗನುಗುಣವಾಗಿ ಜಮೆ ಮಾಡುವುದು.
7) ಈ ರೀತಿ ಸಿಬ್ಬಂದಿಯ ವೈಯಕ್ತಿಕ ಖಾತೆಗೆ ಜಮಾ ಮಾಡಿದ ಹಣದ ಬಗ್ಗೆ ಅದರ ಮುಂದಿನ ತಿಂಗಳು ಇಲಾಖೆಯಿಂದ ಹಣ ಪಾವತಿ ಪಡೆಯಲು ಸಲ್ಲಿಸುವ ಬಿಲ್ಲಿನೊಂದಿಗೆ ತಪ್ಪದೇ ವಿವರಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ನೀಡಬೇಕು.

8) ಈ ಟೆಂಡರ್ ದಾಖಲೆಯ ಅನುಬಂಧ (3) ರಲ್ಲಿ ಪ್ರತಿ ತಿಂಗಳು ಮತ್ತು ಅರ್ಧವಾರ್ಷಿಕವಾಗಿ ಟೆಂಡರ್‌ದಾರರು ಇಲಾಖೆಗೆ ಸಲ್ಲಿಸುವ ವಿವಿಧ ದಾಖಲೆಗಳ ಪಟ್ಟಿಯನ್ನು ನೀಡಿದೆ. ಅದರಂತೆ ಟೆಂಡರ್‌ದಾರರು ಆಯಾ ತಿಂಗಳು ಇ.ಪಿ.ಎಫ್., ಇ.ಎಸ್.ಐ. ಮತ್ತು ಸೇವಾ ತೆರಿಗೆಗಳ ದಾಖಲೆಗಳನ್ನು ಸಲ್ಲಿಸಿ ಹಿಂದಿನ ತಿಂಗಳ ಹಣವನ್ನು ಮರುಪಾವತಿಯಾಗಿ ಪಡೆಯತಕ್ಕದ್ದು.

9) ಟೆಂಡರ್‌ದಾರರು ಕನಿಷ್ಟ 2 ತಿಂಗಳ ಅವಧಿಯಲ್ಲಿ ಪ್ರತಿಯೊಬ್ಬ ಸಿಬ್ಬಂದಿಯ ಇ.ಪಿ.ಎಫ್. ಮತ್ತು ಇ.ಎಸ್.ಐ. ಖಾತೆಗಳನ್ನು ತೆರೆಯಬೇಕು. ಒಂದು ವೇಳೆ ಖಾತೆ ತೆರೆಯದಿದ್ದಲ್ಲಿ ಇದು ಟೆಂಡರ್ ನಿಬಂಧನೆಯ ಉಲ್ಲಂಘನೆ ಎಂದು ಪರಿಗಣಿಸಿ ಟೆಂಡರ್ ರದ್ದು ಮಾಡಲಾಗುವುದು. ಮತ್ತು ಖಾತೆ ತೆರೆಯುವವರೆಗಿನ ಅವಧಿಯಲ್ಲಿ ಯಾವುದೇ ನೌಕರರ ವಂತಿಕೆ ಕಡಿತಗಳನ್ನು ಟೆಂಡರ್‌ದಾರರು ಕಟಾವು ಮಾಡಬಾರದು. ಮತ್ತು ಈ ಸಂಬಂಧ ಹಣವನ್ನು ನೌಕರರಿಗೆ ವೇತನದಲ್ಲಿ ಸೇರಿಸಿ ನೀಡಬೇಕು. ವೈಯಕ್ತಿಕ ಖಾತೆಗಳನ್ನು ತೆರೆಯುವ ತನಕ ಇಲಾಖೆಯು ಸಹ ತನ್ನ ವಂತಿಕೆಯನ್ನು ಟೆಂಡರ್‌ದಾರರಿಗೆ ನೀಡುವಂತಿಲ್ಲ.

10) ಒಪ್ಪಂದ ಮಾಡಿಕೊಂಡ ನಂತರ ನಿಗದಿತ ಅವಧಿಯೊಳಗೆ ಒಪ್ಪಂದದ ಪ್ರಕಾರ ಸಂಪೂರ್ಣ ಪ್ರಮಾಣದಲ್ಲಿ ವಹಿಸಿಕೊಡಲಾದ ಸೇವೆಗಳನ್ನು ಪ್ರಾರಂಭ ಮಾಡದಿದ್ದರೆ ಅಂತಹ ಟೆಂಡರುದಾರರ ಇಎಂಡಿ ಮತ್ತು ಭದ್ರತಾ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಅಲ್ಲದೇ ಪ್ರಾರಂಭಿಸಿದ ಕಾರ್ಯವು ತೃಪ್ತಿಕರವಾಗಿರದೇ ಇದ್ದಲ್ಲಿ ಮುಂಚಿತವಾಗಿ ಒಂದು ತಿಂಗಳ ನೋಟೀಸು ಕೊಡುವುದರ ಮೂಲಕ ಒಪ್ಪಂದವನ್ನು ಮುಕ್ತಾಯಗೊಳಿಸಲು ಹಾಗೂ ಅಂಥವರ ಸೇವೆಗಳನ್ನು ಸ್ಥಗಿತಗೊಳಿಸಲು ನಿರ್ದೇಶಕರು, ವಿಮ್ಸ್., ಬಳ್ಳಾರಿ ಇವರು ಅಧಿಕಾರವನ್ನು ಹೊಂದಿರುತ್ತಾರೆ.

11) ಈ ಟೆಂಡರನ ಇಎಂಡಿ ಮತ್ತು ಭದ್ರತಾ ಠೇವಣಿಯ ಮೊತ್ತವನ್ನು ಟೆಂಡರುದಾರರು ಈ ಸಂಸ್ಥೆಯಿಂದಾಗಲಿ, ಇಲಾಖೆಯಿಂದಾಗಲಿ ಬರಬಹುದಾದ ಯಾವುದೇ ಬಾಕಿ ಪಾವತಿಗೆ ಸರಿಹೊಂದಿಸಲು ಅವಕಾಶವಿರುವುದಿಲ್ಲ. ಗುತ್ತಿಗೆ ಪಡೆಯಲು ಅರ್ಹರಾದ ಟೆಂಡರುದಾರರ ಭದ್ರತಾ ಠೇವಣಿಯ ಮೊತ್ತವನ್ನು ದರಗುತ್ತಿಗೆ ಅವಧಿಯು ಪೂರ್ಣಗೊಂಡ ಬಳಿಕ ಹಿಂದಿರುಗಿಸಲಾಗುವುದು. ಈ ಮೊತ್ತಕ್ಕೆ ಯಾವುದೇ ಬಡ್ಡಿ ಕೊಡಲಾಗುವುದಿಲ್ಲ.

12. (ಅ) **<u>ಸಿಬ್ಬಂದಿ ವೇತನದಲ್ಲಿ ಕಡಿತಗೊಳಿಸಬಹುದಾದ ಬಾಬ್ತುಗಳು:</u>**

1. **<u>ಕಾರ್ಮಿಕ ಭವಿಷ್ಯ ನಿಧಿ (E.P.F)</u>:** ಒಬ್ಬ ನೌಕರನ ಮೂಲವೇತನ ಹಾಗೂ ದಿನಭತ್ಯೆ ಸೇರಿ ರೂ.6,500/–ಗಳಿಗಿಂತ ಹೆಚ್ಚು ವೇತನ ಪಡೆಯುತ್ತಿದ್ದಲ್ಲಿ ಇ.ಪಿ.ಎಫ್. ವಂತಿಗೆ ಕಡ್ಡಾಯವಿರುವುದಿಲ್ಲ. ಆದ್ದರಿಂದ ಅಂತಹ ನೌಕರನ ಇ.ಪಿ.ಎಫ್. ವಂತಿಗೆಯನ್ನು ಕಡಿತಗೊಳಿಸಬಾರದು. ರೂ. 6,500/–ಗಳಿಗಿಂತ ಕಡಿಮೆ ವೇತನ ಪಡೆಯುತ್ತಿದ್ದಲ್ಲಿ ನೌಕರನ ಬಾಬ್ತು ಒಟ್ಟು 25.61% ಇ.ಪಿ.ಎಫ್. ಕಡಿತ ಮಾಡಬೇಕು. ಅದರಲ್ಲಿ 12% ನೌಕರನ ವಂತಿಗೆಯಾಗಿದ್ದು, ಇದನ್ನು ನೌಕರನಿಗೆ ನೀಡುವ ಮೂಲವೇತನ ಮತ್ತು ದಿನಭತ್ಯೆಯಲ್ಲಿ ಒಟ್ಟಾಗಿ ಕಡಿತಗೊಳಿಸಬೇಕು. ಉಳಿದ 13.61% ಎಂಪ್ಲಾಯರ್ಸ್ ವಂತಿಗೆಯಾಗಿದ್ದು, ಇದನ್ನು ಇಲಾಖೆಯು ಭರಿಸುವುದು. ಈ ರೀತಿ ಕಟಾವು ಮಾಡಿದ ನೌಕರನ ವಂತಿಗೆ ಮತ್ತು ಎಂಪ್ಲಾಯರ್ಸ್ ವಂತಿಗೆಯನ್ನು ಪ್ರತಿ ನೌಕರನಿಗೆ ಇ.ಪಿ.ಎಫ್. ಇಲಾಖೆಯು ನೀಡುವ ನೌಕರನ ವೈಯಕ್ತಿಕ ಖಾತೆಯಲ್ಲಿ ಜಮಾ ಮಾಡಬೇಕು ಈ ಇ.ಪಿ.ಎಫ್. ಸಂಬಂಧ ಅನುಬಂಧ (3) ರಲ್ಲಿರುವ ಎಲ್ಲಾ ದಾಖಲೆಗಳನ್ನು ನಿರ್ವಹಿಸಬೇಕು.

2. **<u>ರಾಜ್ಯ ಕಾರ್ಮಿಕ ವಿಮೆ (E.S.I.)</u>:** ಪ್ರತಿ ನೌಕರನ ಒಟ್ಟು ಸಂಬಳ ಅಂದರೆ ಮೂಲವೇತನ, ದಿನಭತ್ಯೆ, ಇತರೆ ಭತ್ಯೆಗಳನ್ನೊಳಗೊಂಡಂತೆ ರೂ.10,000/–ಗಳಿಗಿಂತ ವೇತನ ಕಡಿಮೆ ಇದ್ದಲ್ಲಿ ಇ.ಎಸ್.ಐ. ವಂತಿಗೆಯನ್ನು ಕಟಾವು ಮಾಡಬೇಕು. ಒಂದು ವೇಳೆ ರೂ.10,000/–ಕ್ಕಿಂತ ವೇತನ ಹೆಚ್ಚು ಪಡೆಯುತ್ತಿದ್ದಲ್ಲಿ ಕಟಾವು ಮಾಡುವುದು ಕಡ್ಡಾಯವಲ್ಲ. ಈ ರೀತಿ ರೂ.10,000/–ಗಳಿಗಿಂತ ಕಡಿಮೆ ವೇತನ ಪಡೆಯುವ ನೌಕರರಿಗೆ ಒಟ್ಟು 6.5% ಇ.ಎಸ್.ಐ. ವಂತಿಗೆಯನ್ನು ಕಡಿತಗೊಳಿಸಬೇಕು. ಇದರಲ್ಲಿ 1.75% ನೌಕರನ ವಂತಿಗೆ ಮತ್ತು 4.75% ಎಂಪ್ಲಾಯರ್ಸ್ ವಂತಿಗೆಯಾಗಿರುತ್ತದೆ. ಇ.ಎಸ್.ಐ. ಇಲಾಖೆಯಲ್ಲಿ ಪ್ರತಿ ನೌಕರನ ಬಗ್ಗೆ ಒಂದು ಪ್ರತ್ಯೇಕ ಖಾತೆ ಸಂಖ್ಯೆ ಪಡೆದು ಆ ಖಾತೆಗೆ ಟೆಂಡರ್‌ದಾರರು ಜಮಾ ಮಾಡಬೇಕು. ಇಲ್ಲವಾದಲ್ಲಿ ಈ ವಂತಿಕೆಗಳನ್ನು ಕಟಾವು ಮಾಡಬಾರದು. ಒಂದು ವೇಳೆ ಕಡಿತಗಳನ್ನು ಕಟಾವು ಮಾಡಿ ಸಂಬಂಧಪಟ್ಟ ಇಲಾಖೆಗಳಿಗೆ ಜಮಾ ಮಾಡದಿದ್ದಲ್ಲಿ ಇದು ಟೆಂಡರ್ ಉಲ್ಲಂಘನೆ ಎಂದು ಪರಿಗಣಿಸಲಾಗುವುದು. ಇ.ಪಿ.ಎಫ್. ಮತ್ತು ಇ.ಎಸ್.ಐ. ಸಂಬಂಧ ಅನುಬಂಧ (3) ರಲ್ಲಿ ಹೇಳಿರುವ ಎಲ್ಲಾ ದಾಖಲೆಗಳನ್ನು ಟೆಂಡರ್‌ದಾರರು ನಿರ್ವಹಿಸಬೇಕು.

3. **<u>ವೃತ್ತಿ ತೆರಿಗೆ (Professional Tax)</u>**: ನೌಕರನ ಒಟ್ಟು ವೇತನ ರೂ.10,000/–ಗಳಿಗಿಂತ ಕಡಿಮೆ ಇರುವವರಿಗೆ ವೃತ್ತಿ ತೆರಿಗೆ ಅನ್ವಯವಾಗುವುದಿಲ್ಲ. ಆದರೆ ರೂ.10,000/–ಗಳಿಗಿಂತ ಹೆಚ್ಚು ಪಡೆಯುವವರಿಗೆ ಪ್ರತಿ ತಿಂಗಳು ರೂ. 150/–ಗಳನ್ನು ಹಾಗೂ ರೂ.15,000/–ಗಳಿಗಿಂತ ಹೆಚ್ಚು ವೇತನ ಪಡೆಯುವವರಿಗೆ ರೂ.200/–ಗಳನ್ನು ಕಡಿತಗೊಳಿಸಿ ಸರ್ಕಾರಕ್ಕೆ ಜಮಾ ಮಾಡುವುದು. ಈ ಬಗ್ಗೆ ಅನುಬಂಧ (3)ರಲ್ಲಿ ಹೇಳಿರುವ ಎಲ್ಲಾ ದಾಖಲೆಗಳನ್ನು ನಿರ್ವಹಿಸಬೇಕು.

4. **<u>ಸೇವಾ ತೆರಿಗೆ (Service Tax)</u>**: ಟೆಂಡರ್‌ದಾರರು ಮಾನವ ಹೊರಸಂಪನ್ಮೂಲ ಸೇವೆಯನ್ನು ಒದಗಿಸುವ ಸಂಬಂಧ ಒಟ್ಟು ವೇತನಕ್ಕೆ 12.36% ರಷ್ಟು ಸೇವಾ ತೆರಿಗೆಯನ್ನು ಸರ್ಕಾರಕ್ಕೆ ಪಾವತಿಸಬೇಕಾಗುತ್ತದೆ. ಅದಕ್ಕಾಗಿ ಪ್ರತಿ ತಿಂಗಳು ಸೇವಾ ತೆರಿಗೆ ಪಾವತಿಸಿದ ಚಲನ್‌ಗಳನ್ನು ಇಲಾಖೆಗೆ ಹಾಜರುಪಡಿಸಬೇಕು. ಮತ್ತು ಪೂರ್ವಭಾವಿಯಾಗಿ ಪಾವತಿಸಿ ಇಲಾಖೆಯಿಂದ ಮರುಪಾವತಿ ಪಡೆಯಬೇಕು. ಈ ಬಗ್ಗೆ ಅನುಬಂಧ (3)ರಲ್ಲಿ ಹೇಳಿರುವ ಎಲ್ಲಾ ದಾಖಲೆಗಳನ್ನು ನಿರ್ವಹಿಸಬೇಕು.

5. ಟೆಂಡರ್‌ದಾರರು ಪ್ರತಿ ತಿಂಗಳು ಈ ನೌಕರರಿಗೆ ಸಂಬಂಧಿಸಿದಂತೆ ಅನುಬಂಧ (3)ರಲ್ಲಿ ಹೇಳಿರುವ ವಿವರದಂತೆ ನೌಕರನಿಗೆ ವೇತನ ನೀಡುವದು. ಮತ್ತು ಕಡಿತಗಳನ್ನು ಸಂಬಂಧಪಟ್ಟ ನೌಕರರ ವೈಯಕ್ತಿಕ ಖಾತೆಗಳಿಗೆ ಜಮಾ ಮಾಡುವುದು. ಇವೆಲ್ಲವನ್ನು ಪೂರ್ವಭಾವಿಯಾಗಿ ತಮ್ಮ ಸ್ವಂತ ಹಣ ಪಾವತಿಸತಕ್ಕದ್ದು. ಈ ರೀತಿ ಪಾವತಿಸಿದ ಕಡಿತಗಳ ವಿವರಗಳನ್ನು ಆ ತಿಂಗಳು ಮುಗಿದ ನಂತರ ಸಂಬಂಧಪಟ್ಟ ಒಚರ್‌ಗಳು, ಚಲನ್‌ಗಳ ದಾಖಲೆಗಳನ್ನು ಹಾಜರುಪಡಿಸಿ, ಈ ಎಲ್ಲಾ ಹಣವನ್ನು ಇಲಾಖೆಯಿಂದ ಮರುಪಾವತಿ ಮಾಡಿಕೊಳ್ಳುವುದು. ಯಾವುದೇ ಕಾರಣಕ್ಕೂ ಮರುಪಾವತಿ ಅಲ್ಲದೇ ಮುಂಗಡವಾಗಿ ಟೆಂಡರ್‌ದಾರರಿಗೆ ಹಣವನ್ನು ನೀಡಲಾಗುವುದಿಲ್ಲ. ಟೆಂಡರ್‌ದಾರರು ಯಾವುದೇ ಕಾರಣಕ್ಕೂ 2 ತಿಂಗಳಿಗೂ ಹೆಚ್ಚು ಕಾಲ ವೇತನ ಪಾವತಿಯನ್ನು ವಿಳಂಬ ಮಾಡುವಂತಿಲ್ಲ. ಹಾಗೆ ಮಾಡಿದಲ್ಲಿ ಇದು ಟೆಂಡರ್ ಷರತ್ತು ಉಲ್ಲಂಘನೆ ಎಂದು ಪರಿಗಣಿಸಿ ಟೆಂಡರ್ ರದ್ದು ಮಾಡಲಾಗುವುದು.

6. ಇ.ಎಸ್.ಐ., ಇ.ಪಿ.ಎಫ್., ವೃತ್ತಿತೆರಿಗೆ ಮತ್ತು ಸೇವಾ ತೆರಿಗೆ ಕಡಿತಗಳನ್ನು ನೌಕರನ ವಂತಿಗೆಯಿಂದ ಕಟಾವು ಮಾಡಿ ಅವುಗಳನ್ನು ಜಮಾ ಮಾಡದಿದ್ದಲ್ಲಿ ಅದು ಶಿಕ್ಷಾರ್ಹ ಅಪರಾಧವಾಗುತ್ತದೆ. ಮತ್ತು ಈ ಹಣ ದುರುಪಯೋಗದ ಮೇಲೆ ಟೆಂಡರ್‌ದಾರನ ಮೇಲೆ ಇಲಾಖೆಯು ಕ್ರಿಮಿನಲ್ ಮೊಕದ್ದಮೆ ಹಕ್ಕುವುಳ್ಳದ್ದಾಗಿರುತ್ತದೆ.

7. ಟೆಂಡರ್‌ದಾರರು ತಾನು ಪಡೆದ ಗುತ್ತಿಗೆಯನ್ನು ಬೇರೆಯವರಿಗೆ ವರ್ಗಾಯಿಸಬಾರದು. ಮತ್ತು ಉಪಗುತ್ತಿಗೆ ನೀಡಬಾರದು. ಇದು ಟೆಂಡರ್ ಷರತ್ತಿನ ಉಲ್ಲಂಘನೆ ಆಗುತ್ತದೆ.

8. ನೌಕರನಿಗೆ ಚೆಕ್ ಮುಖಾಂತರ ಪ್ರತಿ ತಿಂಗಳ 5ನೇ ತಾರೀಖಿನೊಳಗೆ ತಪ್ಪದೇ ಪಾವತಿಸಬೇಕು. ವಿವಿಧ ವಂತಿಗೆಗಳ ಕಡಿತಗಳನ್ನು ಮಾಡಿದ ಬಗ್ಗೆ ನೌಕರನಿಗೆ ಪ್ರತಿ 6 ತಿಂಗಳಿಗೊಮ್ಮೆ ಸಂಬಂಧಪಟ್ಟ ಇಲಾಖೆಗಳಿಂದ ಸ್ಟೇಟ್‌ಮೆಂಟ್ ಪಡೆದು ನೌಕರರಿಗೆ ನೀಡುವುದು.

9. ಎಲ್ಲಾ ಟೆಂಡರ್ ಷರತ್ತುಗಳನ್ನು ಪಾಲಿಸುವುದಾಗಿಯೂ ಯಶಸ್ವಿ ಟೆಂಡರ್‌ದಾರರು ಗುತ್ತಿಗೆ ಕರಾರು ಒಪ್ಪಂದಕ್ಕೆ ಸಹಿ ಮಾಡಬೇಕು.

10. ಈ ಮೇಲಿನ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಇಲಾಖೆಯು ಅವರಿಗೆ ಒಂದು ತಿಂಗಳ ಲಿಖಿತ ನೋಟೀಸ್ ನೀಡಿ ಗುತ್ತಿಗೆಯನ್ನು ರದ್ದುಪಡಿಸುವ ಅಧಿಕಾರವನ್ನು ಹೊಂದಿರುತ್ತದೆ. ಇದೇ ರೀತಿ ಗುತ್ತಿಗೆದಾರರು ಗುತ್ತಿಗೆ ಕಾರ್ಯವನ್ನು ನಿಲ್ಲಿಸುವುದಿದ್ದಲ್ಲಿ ಕನಿಷ್ಟ 2 ತಿಂಗಳ ಮುಂಚೆ ನೋಟೀಸ್‌ನ್ನು ಇಲಾಖೆಯ ಅಧಿಕಾರಿಗಳಿಗೆ ನೀಡುವುದು.

11. ಇಲಾಖೆ ಮತ್ತು ಟೆಂಡರ್‌ದಾರರ ಮಧ್ಯೆ ಗುತ್ತಿಗೆ ಅವಧಿಯಲ್ಲಿ ಅಥವಾ ಗುತ್ತಿಗೆ ನಂತರ ಉದ್ಭವಿಸಬಹುದಾದ ತಕರಾರುಗಳನ್ನು ಸ್ಥಳೀಯ ನ್ಯಾಯಾಲಯದಲ್ಲಿ ಮಾತ್ರ ಬಗೆಹರಿಸಿಕೊಳ್ಳಬಹುದು.

# ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬಳ್ಳಾರಿ

ಇವರಿಗೆ,
ನಿರ್ದೇಶಕರು,
ವಿಮ್ಸ್, ಬಳ್ಳಾರಿ.

ವಿಷಯ: ವಿಮ್ಸ್ ಸಂಸ್ಥೆಯ ಅಧೀನದಲ್ಲಿರುವ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಯಲ್ಲಿ ಖಾಲಿಯಿರುವ ಗ್ರೂಪ್ ''ಡಿ'' ಸಿಬ್ಬಂದಿ ಸೇವೆಯನ್ನು ಹೊರಸಂಪನ್ಮೂಲದ ಏಜೆನ್ಸಿಯ ಮೂಲಕ ಪಡೆಯುವ ಬಗ್ಗೆ ಅಲ್ಪಾವಧಿ ಟೆಂಡರ್ ಪ್ರಕಟಣೆ.

*********

**ಅಲ್ಪಾವಧಿ ಟೆಂಡರ್ ಫಾರಂ ಭಾಗ–ಎ (ತಾಂತ್ರಿಕ ಲಕೋಟೆ)**

| | | | |
|---|---|---|---|
| 1 | ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ | : | ಸಂಖ್ಯೆ: ವಿಮ್ಸ್/ಸಾಮಾನ್ಯ(1)/ /2013–14<br>ದಿನಾಂಕ: |
| 2 | ಟೆಂಡರ್‌ದಾರರ ಹೆಸರು ಮತ್ತು ವಿಳಾಸ | : | |
| 3 | ಟೆಂಡರ್‌ದಾರರು ವ್ಯಕ್ತಿಯೇ ಅಥವಾ ಸಂಸ್ಥೆಯೆ, ಸಂಸ್ಥೆಯಾಗಿದ್ದಲ್ಲಿ ನೊಂದಣಿ ವಿವರಗಳು ಹಾಗೂ ಅದರ ಪ್ರತಿಗಳನ್ನು ಲಗತ್ತಿಸಬೇಕು | : | |
| 4 | ಅಲ್ಪಾವಧಿ ಟೆಂಡರ್ ಫಾರಂ ಶುಲ್ಕ ಪಾವತಿಸಿದ ಬಗ್ಗೆ ವಿವರಗಳು | : | |
| 5 | ಇ.ಎಂ.ಡಿ.ಮೊತ್ತ ಹಾಗೂ ಡಿ.ಡಿ. ವಿವರಗಳು (ರಾಷ್ಟ್ರೀಕೃತ ಬ್ಯಾಂಕುಗಳಿಂದ ಪಡೆದು ಸಲ್ಲಿಸಬೇಕು) | : | ರೂ. : 7,05,408.00<br>ಡಿ.ಡಿ. ಸಂಖ್ಯೆ :<br>ಮತ್ತು ಬ್ಯಾಂಕ್ :<br>ದಿನಾಂಕ : |
| 6 | ಕಾರ್ಮಿಕ ಇಲಾಖೆಯಲ್ಲಿ ನೊಂದಣಿಯಾದ ಬಗ್ಗೆ ವಿವರಗಳು (ನೊಂದಣಿ ಪತ್ರದ ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ ಸಲ್ಲಿಸತಕ್ಕದ್ದು.) | : | |
| 7 | ಸರ್ವೀಸ್ ಟ್ಯಾಕ್ಸ್ ನೊಂದಣಿ ವಿವರಗಳು ( ಪ್ರಮಾಣ ಪತ್ರದ ಪ್ರತಿ ಲಗತ್ತಿಸಬೇಕು) | : | |
| 8 | ಇ.ಪಿ.ಎಫ್.ಕಾಯ್ದೆ ಅಡಿಯಲ್ಲಿ ಪಡೆದಿರುವ ಕೋಡ್ ಸಂಖ್ಯೆ ವಿವರ ( ಪ್ರತಿ ಲಗತ್ತಿಸುವುದು) | : | |
| 9 | ಇ.ಎಸ್.ಐ.ಕಾಯ್ದೆ ಅಡಿಯಲ್ಲಿ ಪಡೆದಿರುವ ಕೋಡ್ ಸಂಖ್ಯೆ ವಿವರ ( ಪ್ರತಿ ಲಗತ್ತಿಸುವುದು) | : | |
| 10 | ವೃತ್ತಿ ತೆರಿಗೆ ನೊಂದಣಿ ವಿವರಗಳು (ಪ್ರಮಾಣ ಪತ್ರ ಲಗತ್ತಿಸಿಬೇಕು) | : | |
| 11 | ಪ್ಯಾನ್ ಕಾರ್ಡ್ ವಿವರಗಳು ( ಪ್ರತಿ ಲಗತ್ತಿಸುವುದು) | : | |

| | | | |
|---|---|---|---|
| 12 | ಕಳೆದ 2 ವರ್ಷಗಳಲ್ಲಿ ಸರ್ಕಾರಿ ಆಸ್ಪತ್ರೆ/ಸಂಸ್ಥೆಗಳಲ್ಲಿ (500 ಹಾಸಿಗೆಯುಳ್ಳ ಹಾಗೂ 1000 ಹಾಸಿಗೆ ಆಸ್ಪತ್ರೆಗಳಲ್ಲಿ) ಹೊರ ಸಂಪನ್ಮೂಲ ಸೇವೆ ನೀಡಿದ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಂದ ಪಡೆದ ಕಾರ್ಯಾದೇಶ ಹಾಗೂ ಅನುಭವ ಪ್ರಮಾಣ ಪತ್ರಗಳ ದೃಢೀಕೃತ ಪ್ರತಿ ಲಗತ್ತಿಸುವುದು. | : | |
| 13 | ಕಳೆದ 3 ವರ್ಷಗಳಲ್ಲಿ ಟೆಂಡರ್‌ದಾರರು ಮಾನವ ಹೊರ ಸಂಪನ್ಮೂಲ ಸೇವೆ ಒದಗಿಸಿದ ಸಂಬಂಧ ವಾರ್ಷಿಕ ವಹಿವಾಟುಗಳ ದೃಢೀಕೃತ ಆಡಿಟ್ ವರದಿಯ ವಿವರಗಳನ್ನು ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ ಸಲ್ಲಿಸತಕ್ಕದ್ದು. | : | |
| 14 | 2013–14 ನೇ ಸಾಲಿಗೆ ಆರ್ಥಿಕ ದೃಢತೆ ತೋರಿಸಲು ರೂ. 1 ಕೋಟಿ 13 ಲಕ್ಷ ಸಾಲ್ವೆನ್ಸಿ ಪ್ರಮಾಣ ಪತ್ರವನ್ನು ರಾಷ್ಟ್ರೀಕೃತ ಬ್ಯಾಂಕುಗಳಿಂದ ಪಡೆದು ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ ಸಲ್ಲಿಸತಕ್ಕದ್ದು. | : | |

ಅಲ್ಪಾವಧಿ ಟೆಂಡರ್ ದಸ್ತಾವೇಜುಗಳನ್ನು ಪರಿಶೀಲಿಸಿ, ಮೇಲಿನ ಮಾಹಿತಿ ನೀಡಿದ್ದು ಎಲ್ಲಾ ಮಾಹಿತಿಯು ಸರಿ ಇದೆ ಎಂದು ದೃಢೀಕರಿಸಿದೆ.

**ಟೆಂಡರ್‌ದಾರರ ಹೆಸರು ಸಹಿ ಮತ್ತು ಮೊಹರು**

# <u>ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬಳ್ಳಾರಿ</u>

ಇವರಿಗೆ,
ನಿರ್ದೇಶಕರು,
ವಿಮ್ಸ್, ಬಳ್ಳಾರಿ.

ವಿಷಯ: ವಿಮ್ಸ್ ಸಂಸ್ಥೆಯ ಅಧೀನದಲ್ಲಿರುವ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಯಲ್ಲಿ ಖಾಲಿಯಿರುವ ಗ್ರೂಪ್ ''ಡಿ'' ಸಿಬ್ಬಂದಿ ಸೇವೆಯನ್ನು ಹೊರಸಂಪನ್ಮೂಲದ ಏಜೆನ್ಸಿಯ ಮೂಲಕ ಪಡೆಯುವ ಬಗ್ಗೆ ಅಲ್ಪಾವಧಿ ಟೆಂಡರ್ ಪ್ರಕಟಣೆ.

*********

**<u>ಅಲ್ಪಾವಧಿ ಟೆಂಡರ್ ಫಾರಂ ಭಾಗ-ಬಿ (ಆರ್ಥಿಕ ಲಕೋಟೆ)</u>**

| | | | |
|---|---|---|---|
| 1 | **ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ** | : | **ಸಂಖ್ಯೆ: ವಿಮ್ಸ್/ಸಾಮಾನ್ಯ(1)/ /2013-14**<br>**ದಿನಾಂಕ:** |
| 2 | **ವಿಮ್ಸ್ ಸಂಸ್ಥೆಯ ಅಧೀನದಲ್ಲಿರುವ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಯಲ್ಲಿ ಖಾಲಿಯಿರುವ ಗ್ರೂಪ್ "ಡಿ"ಹುದ್ದೆಗಳಿಗೆ ಟೆಂಡರ್‌ದಾರರು ಅನುಚರರ ಸೇವೆ ಒದಗಿಸುವ ಬಗ್ಗೆ ಪ್ರತಿ ನೌಕರನ ಒಟ್ಟು ವೇತನಕ್ಕೆ (ನೌಕರನ ವೇತನ ಹಾಗೂ ಎಂಪ್ಲಾಯರ್ಸ್ ವಂತಿಕೆಯ ಮೊಬಲಗಿಗೆ ಮಾತ್ರ ಪರಿಗಣಿಸಬೇಕು. ಇದರ ಲೆಕ್ಕಾಚಾರಕ್ಕೆ ಸರ್ವೀಸ್ ಟ್ಯಾಕ್ಸ್ ಸೇರುವಂತಿಲ್ಲ.) ಶೇಕಡವಾರು ಪಡೆಯುವ ಸೇವಾ ವೆಚ್ಚವನ್ನು ಶೇಕಡವಾರು (Percentage) ದರದಲ್ಲಿ ನಮೂದಿಸಬೇಕು. ಉದಾ:1%, 2% ಇತ್ಯಾದಿ.** | : | **ಸೇವಾ ವೆಚ್ಚ ಶೇಕಡವಾರು ದರ___________%**<br>**ಅಕ್ಷರಗಳಲ್ಲಿ ______________________**<br>**______________________________** |

**ಟೆಂಡರ್‌ದಾರರ ಹೆಸರು ಸಹಿ ಮತ್ತು ಮೊಹರು**

## ಗ್ರೂಫ್ "ಎ" ಟೆಂಡರ್

| ಕ್ರ. ಸಂ | ಇಲಾಖೆ | ಖಾಲಿಯಿರುವ ಗ್ರೂಪ್–'ಡಿ' ಹುದ್ದೆ |
|---|---|---|
| | **ವಿಜಯನಗರ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆ, ವಿಮ್ಸ್ ಬಳ್ಳಾರಿ, ಖಾಲಿ ಇರುವ ಹುದ್ದೆಗಳ ವಿವರ** | |
| 1 | ನೆಲ ಮಹಡಿ ಓ.ಪಿ.ಡಿ. ಮತ್ತು ಒಂದನೇ ಮಹಡಿ ಓ.ಪಿ.ಡಿ. | 50 |
| 2 | ನೆಲ ಮಹಡಿ ವಾರ್ಡ್ | 30 |
| 3 | ಮೊದಲನೆಯ ಮಹಡಿ ವಾರ್ಡ್ | 25 |
| 4 | ಎರಡನೆಯ ಮಹಡಿ ವಾರ್ಡ್ | 20 |
| 5 | ಅಪರೇಷನ್ ಥಿಯೇಟರ್, ಕಿಚನ್, ದೋಬಿ ಘಾಟ್ | 20 |
| | ಸ್ವಚ್ಛತಾ ಮತ್ತು ಭಂಗಿ (ಸ್ಕ್ಯಾವೆಂಜರ್) | 15 |
| | **ಒಟ್ಟು** | **160** |

**Karnataka Schedule employments minimum wages G.O.No. KAE:152:LWA:2008 dated: 21.02.2011. Table No.77A Urbgan local bodies and Town and village Panchayats**

Basic - 4264.00
+VDA - 1357.20
**A.Total - 5621.20**

**Employers Contribution**
EPF 13.61% - 765.04
ESI 4.75% - 267.00
Service Tax 12.36%- 694.78
**B.Total - 1726.82**

**Grand Total (A+B) = 7348.02**

**ಗ್ರೂಪ್ –'ಡಿ'/ ಸ್ವಚ್ಛತಾಗಾರರು = 160 x 7348 x 12 = 1,41,08,160.00**

**ಇ.ಎಂ.ಡಿ. ಮೊತ್ತ = ರೂ. 7,05,408 .00**

ಕರ್ನಾಟಕ ಸರ್ಕಾರ Web: www.vimsbellary.org GOVERNMENT OF KARNATAKA

ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬಳ್ಳಾರಿ

VIJAYANAGAR INSTITUTE OF MEDICAL SCIENCES, BELLARY

Reg.No:205/1995-96] [Recognized by Medical Council of India New Delhi vide No:MCI-57(3)/79-Med/1912 Dated : 16-04-1979

Director : ☏-08392-242387, PA: ☏ -08392-235201, FAX:08392-235202, Principal: ☏ -08392-235204,
e-mail IDs : directorvimsbellary@gmail.com vims_42366@yahoo.com principalvimsbellary@gmail.com

ಸಂ: ವಿಮ್ಸ್/ಸಾಮಾನ್ಯ–1/82 /2013–14 ದಿನಾಂಕ : 05.06.2013.

ಗೆ,
ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳು,
ಬಳ್ಳಾರಿ.

ಮಾನ್ಯರೇ,

**ವಿಷಯ:–** ವಿಮ್ಸ್ ಸಂಸ್ಥೆಯ ಅಧೀನದಲ್ಲಿರುವ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಗಳಲ್ಲಿ ಖಾಲಿಯಿರುವ ಗ್ರೂಪ್ "ಡಿ" ಸಿಬ್ಬಂದಿಯ ಸೇವೆಯನ್ನು ಹೊರ ಸಂಪನ್ಮೂಲದ ಏಜೆನ್ಸಿಯ ಮೂಲಕ ಪಡೆಯಲು ಅಲ್ಪಾವಧಿ ಟೆಂಡರ್ ಪ್ರಕಟಣೆ ನೀಡುವ ಬಗ್ಗೆ.

**–**–**

ವಿಮ್ಸ್ ಸಂಸ್ಥೆಯ ಅಧೀನದಲ್ಲಿರುವ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಗಳಲ್ಲಿ ಖಾಲಿಯಿರುವ ಗ್ರೂಫ್ "ಡಿ" ಸಿಬ್ಬಂಧಿಯ ಸೇವೆಯನ್ನು ಹೊರ ಸಂಪನ್ಮೂಲದ ಏಜೆನ್ಸಿಯ ಮೂಲಕ ಪಡೆಯಲು ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಸದರಿ ಟೆಂಡರ್ ಪ್ರಕಟಣೆಯನ್ನು ರಾಜ್ಯಮಟ್ಟದ 2 ದಿನಪತ್ರಿಕೆಗಳಲ್ಲಿ ಹಾಗೂ ಸ್ಥಳೀಯ ಪತ್ರಿಕೆಗಳಲ್ಲಿ ಜಾಹೀರಾತು ಪ್ರಕಟಣೆ ಹೊರಡಿಸಲು ಕೋರಲಾಗಿದೆ. ವಿಷಯಕ್ಕೆ ಸಂಬಂಧಿಸಿದ ಜಾಹೀರಾತು ಮೊತ್ತವನ್ನು ನಿರ್ದೇಶಕರು, ವಿಮ್ಸ್, ಬಳ್ಳಾರಿ ಇವರಿಂದ ಭರಿಸಲಾಗುವುದು. ಸದರಿ ಟೆಂಡರ್ ಪತ್ರಿಕೆ ಪ್ರಕಟಣೆಗಳ 03 ಪ್ರತಿಗಳನ್ನು ಈ ಪತ್ರಕ್ಕೆ ಲಗತ್ತಿಸಿ ತಮ್ಮಲ್ಲಿಗೆ ಸಲ್ಲಿಸಲಾಗಿದೆ.

**ತಮ್ಮ ವಿಶ್ವಾಸಿ**

**ನಿರ್ದೇಶಕರು,**
**ವಿಮ್ಸ್, ಬಳ್ಳಾರಿ.**

ಲಗತ್ತು: 01 ಪ್ರತಿಗಳು

ಕರ್ನಾಟಕ ಸರ್ಕಾರ Web: www.vimsbellary.org GOVERNMENT OF KARNATAKA

# ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬಳ್ಳಾರಿ

# VIJAYANAGAR INSTITUTE OF MEDICAL SCIENCES, BELLARY

Reg.No:205/1995-96] [Recognized by Medical Council of India New Delhi vide No:MCI-57(3)/79-Med/1912 Dated : 16-04-1979

Director : ☎-08392-242387, PA: ☎ -08392-235201, FAX:08392-235202, Principal: ☎ -08392-235204,
e-mail IDs : directorvimsbellary@gmail.com vims_42366@yahoo.com principalvimsbellary@gmail.com

ಸಂ: ವಿಮ್ಸ್/ಸಾಮಾನ್ಯ–1/82 /2013–14 ದಿನಾಂಕ : 05.06.2013.

ಗೆ,
ಮಾನ್ಯ ಜಿಲ್ಲಾಧಿಕಾರಿಗಳು,
ಬಳ್ಳಾರಿ.

**ಮಾನ್ಯರೇ,**

**ವಿಷಯ:–** ವಿಮ್ಸ್ ಸಂಸ್ಥೆಯ ಅಧೀನದಲ್ಲಿರುವ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಗಳಲ್ಲಿ ಖಾಲಿಯಿರುವ ಗ್ರೂಪ್ **"ಡಿ"** ಸಿಬ್ಬಂದಿಯ ಸೇವೆಯನ್ನು ಹೊರ ಸಂಪನ್ಮೂಲದ ಏಜೆನ್ಸಿಯ ಮೂಲಕ ಪಡೆಯಲು ಅಲ್ಪಾವಧಿ ಟೆಂಡರ್ ಪ್ರಕಟಣೆ ನೀಡುವ ಬಗ್ಗೆ.

*************

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಈ ಮೂಲಕ ತಮ್ಮ ಮಾಹಿತಿಗಾಗಿ ಸಲ್ಲಿಸುವುದೇನೆಂದರೆ ವಿಮ್ಸ್ ಸಂಸ್ಥೆಯ ಅಧೀನದಲ್ಲಿರುವ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಗಳಲ್ಲಿ ಖಾಲಿಯಿರುವ ಗ್ರೂಫ್ "ಡಿ" ಸಿಬ್ಬಂಧಿಯ ಸೇವೆಯನ್ನು ಹೊರ ಸಂಪನ್ಮೂಲದ ಏಜೆನ್ಸಿಯ ಮೂಲಕ ಪಡೆಯಲು ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸದರಿ ಅಲ್ಪಾವಧಿ ಟೆಂಡರ್ ಪ್ರಕಟಣೆಯ ಅಧಿಸೂಚನೆ ಮಾಹಿತಿಗಳ ಪ್ರತಿಯನ್ನು ತಮ್ಮ ಮಾಹಿತಿಗಾಗಿ ಸಲ್ಲಿಸಿದೆ.

**ತಮ್ಮ ವಿಶ್ವಾಸಿ**

**ನಿರ್ದೇಶಕರು,**
**ವಿಮ್ಸ್, ಬಳ್ಳಾರಿ.**

**<u>ಲಗತ್ತು:</u>** 01 ಪ್ರತಿಗಳು

| | ಕರ್ನಾಟಕ ಸರ್ಕಾರ Web: www.vimsbellary.org GOVERNMENT OF KARNATAKA |
|---|---|
| | ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬಳ್ಳಾರಿ |
| | VIJAYANAGAR INSTITUTE OF MEDICAL SCIENCES, BELLARY |

*Reg.No:205/1995-96] [Recognized by Medical Council of India New Delhi vide No:MCI-57(3)/79-Med/1912 Dated : 16-04-1979*

*Director : ☏-08392-242387, PA: ☏ -08392-235201, FAX:08392-235202, Principal: ☏ -08392-235204,*
*e-mail IDs : directorvimsbellary@gmail.com vims_42366@yahoo.com principalvimsbellary@gmail.com*

No.VIMS/GNL-1/ 82 /2013-14. Date: 05.06.2013

To,

Manager,
Magnum Intergraphics Pvt Ltd
H.O, 101, Suprabhath, Bejai-Kapikad,
Mangalore.

Sir,

**Sub:-** Advertising of Tender Notification – Reg.

* * * *

Please publish the enclosed Tender Notification No.VIMS/GNL-1/82/2013-14, Dated: 05.06.2013 in "**THE INDIAN EXPRESS**", "**SAMYUKTA KARNATAKA**" & "**VIJAYAVANI"** daily news paper (Karnataka edition) in very next issue and send the copy of the same to this office for reference.

The Payments will be made at Government approved rates of advertisement on receipt of the bill.

Yours faithfully,

**Director**
**VIMS, Bellary**

**Encl:** Tender Notification (1 page)

**Copy to :-**
K. Jayatheertha, Plot No. 54. 3rd Link Road T.G. Layout Moka Road, Gandhinagar, Bellary.

<u>ಕರ್ನಾಟಕ ಸರ್ಕಾರ</u>

# 2013–14ನೇ ಸಾಲಿಗೆ

ವಿಮ್ಸ್ ಸಂಸ್ಥೆಯ ಅಧೀನದಲ್ಲಿರುವ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಯಲ್ಲಿ ಖಾಲಿಯಿರುವ ಗ್ರೂಪ್ "ಡಿ" ಹುದ್ದೆಗಳಲ್ಲಿ ಗ್ರೂಪ್ "ಡಿ" ಸಿಬ್ಬಂದಿಯ ಸೇವೆಯನ್ನು ಹೊರ ಸಂಪನ್ಮೂಲದ ಏಜೆನ್ಸಿ ಮೂಲಕ ಭರ್ತಿ ಮಾಡಲು ಅಲ್ಪಾವಧಿ ಟೆಂಡರ್.

| | | |
|---|---|---|
| 1 | ಅಲ್ಪಾವಧಿ ಟೆಂಡರ್ ಫಾರಂ ವಿತರಿಸುವ ದಿನಾಂಕ | ದಿನಾಂಕ: 05.06.2013 ರಿಂದ 14.06.2013 ರ ಸಾಯಂಕಾಲ 5:30 ಗಂಟೆಯವರೆಗೆ<br>(ರಜಾ ದಿನ ಹೊರತುಪಡಿಸಿ) |
| 2 | ಭರ್ತಿ ಮಾಡಿದ ಅಲ್ಪಾವಧಿ ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ, ಸಮಯ ಮತ್ತು ಸ್ಥಳ | ದಿನಾಂಕ : 15.06.2013<br>ಸಮಯ : ಮಧ್ಯಾಹ್ನ 1.00 ಗಂಟೆಯ ವರೆಗೆ<br>ಸ್ಥಳ : ನಿರ್ದೇಶಕರ ಕಛೇರಿ, ವಿಮ್ಸ್, ಬಳ್ಳಾರಿ |
| 3 | ಅಲ್ಪಾವಧಿ ಟೆಂಡರ್ ಫಾರಂ ತೆರೆಯುವ ದಿನಾಂಕ ಮತ್ತು ಸ್ಥಳ. | ದಿನಾಂಕ : 17.06.2013 ರಂದು<br>ಸಮಯ : ಮಧ್ಯಾಹ್ನ 3.00 ಗಂಟೆಗೆ<br>ಸ್ಥಳ : ನಿರ್ದೇಶಕರ ಕಛೇರಿ, ವಿಮ್ಸ್, ಬಳ್ಳಾರಿ |